# ಅಭಿಮತ

ದೆಹಲಿ ಕರ್ನಾಟಕ ಸಂಘದ ಅಭಿಮತ

ಜನವರಿ-2014
ಬೆಲೆ ರೂ. 1

## ಹೊಸ ವರ್ಷ

# ಹೊಸ ಹುರುಪು



# ಅಭಿಮತ

ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 24 ಸಂಚಿಕೆ 4
ಜನವರಿ 2014, ಬೆಲೆ ರೂ. 1



**ಅಭಿಮತ ಸಂಪಾದಕ ಮಂಡಳಿ**

ಬಾಲಕೃಷ್ಣ ನಾಯ್ಕ್ ಡಿ.
ಸವಿತಾ ಇನಾಮದಾರ್
ಪ್ರಕಾಶ್ ಶೆಟ್ಟಿ ಉಳೆಪಾಡಿ
ಆಶಾಲತಾ ಎಂ.

**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

ಅಧ್ಯಕ್ಷ
ವಸಂತ ಶೆಟ್ಟಿ ಬೆಳ್ಳಾರೆ: 9958697823

ಉಪಾಧ್ಯಕ್ಷರು
ಬಸವರಾಜು ಬಿ.ಕೆ.: 9810391608
ಆಶಾಲತಾ ಎಂ.: 9891249149

ಪ್ರಧಾನ ಕಾರ್ಯದರ್ಶಿ
ಸಿ.ಎಂ.ನಾಗರಾಜ: 9811325440

ಕೋಶಾಧಿಕಾರಿ
ಡಾ. ಅವನೀಂದ್ರನಾಥ್ ರಾವ್ 9868123382

ಜಂಟಿ ಕಾರ್ಯದರ್ಶಿಗಳು
ಎಸ್.ಸಿ. ಹೇಮಲತಾ: 9971121636
ಟಿ.ಎಂ. ಮೈಲಾರಪ್ಪ: 9868347461

ಸಮಿತಿ ಸದಸ್ಯರು
ಆಂಜನಿ ಗೌಡ: 9811165354
ರಾಧಾಕೃಷ್ಣ: 9818252183
ಪೂರ್ಣಿಮಾ ಗೌಡ: 8860916899
ವಿ.ವಿ.ಬಿರಾದಾರ: 9873005409
ಪಿ.ಸಿ.ಶ್ರೀನಿವಾಸ್: 9868170790
ಆನಂದ ಮುರಗೋಡ: 9312931233
ಆಶಾ ಶ್ಯಾಮಸುಂದರ್: 9871256177
ಬಸವರಾಜ ಮೇಟಿ: 9810282951
ಟಿ.ಪಿ. ಬೆಳ್ಳಿಯಪ್ಪ: 9654555795
ಕುಸುಮಾ ಪಿ. ನಂದರಗಿ 9868393955

ವಿಶೇಷ ಆಹ್ವಾನಿತರು
ಐ. ರಾಮು ಮೋಹನ್ ರಾವ್
ಶರತ್ ಎಸ್. ಜವಳಿ
ಡಾ. ಪುರುಷೋತ್ತಮ ಬಿಳಿಮಲೆ
ಅರವಿಂದ ಕೌಜಲಗಿ


## ನೇರ ಮಾತು

ಇತ್ತೀಚೆಗೆ ಮಡಿಕೇರಿಯಲ್ಲಿ ನಡೆದ 80ನೇ ಕನ್ನಡ ಸಾಹಿತ್ಯ ಸಮ್ಮೇಳನ ಹೊಸ ಭರವಸೆಗಳ ಜತೆಗೆ ಕೆಲವೊಂದು ಅನಪೇಕ್ಷಿತ ಸಂಗತಿಗಳಿಗೂ ಸುದ್ದಿಯಾಯಿತು. ಹಿರಿಯ ಸಾಹಿತಿ, ಸಮ್ಮೇಳನದ ಅಧ್ಯಕ್ಷ ನಾ.ಡಿ.ಸೋಜ ಅವರ ಅಧ್ಯಕ್ಷೀಯ ಭಾಷಣವನ್ನು ಮೊಟಕುಗೊಳಿಸಲು ಪ್ರಯತ್ನ ಮಾಡಲಾಯಿತು ಎಂಬುದು ಕನ್ನಡದ ಪ್ರಜ್ಞೆಯನ್ನು ಕುರಿತು ಆಲೋಚಿಸುವವರು ಚಿಂತಿಸಬೇಕಾದ ವಿಷಯ. ಈ ಸಮ್ಮೇಳನ ನಡೆಯುವುದಕ್ಕಿಂತ ತಿಂಗಳು ಮುಂಚೆ ಮೂಡಬಿದಿರೆಯಲ್ಲಿ ನಡೆದ 'ಆಳ್ವಾಸ್ ವಿಶ್ವ ನುಡಿಸಿರಿ ವಿರಾಸತ್', ಸಮ್ಮೇಳನವೊಂದು ಅತ್ಯಂತ ಶಿಸ್ತುಬದ್ಧವಾಗಿ, ವ್ಯವಸ್ಥಿತವಾಗಿ ಹೇಗೆ ನಡೆಯಬೇಕು ಎಂಬುದಕ್ಕೆ ಮಾದರಿಯಾಗಿತ್ತು. ಕನ್ನಡದ ಮನಸ್ಸುಗಳು ಈ ಎರಡು ಸಮಾರಂಭಗಳನ್ನು ತೌಲನಿಕವಾಗಿ ಹೋಲಿಸುವುದು ಸಹಜ. ಕನ್ನಡ ನಾಡು, ನುಡಿ, ಸಂಸ್ಕೃತಿ, ಸಂಗೀತ, ಕಲೆ ಇತ್ಯಾದಿಗಳನ್ನು ಒಂದೆಡೆ ಸೇರಿಸಿ ಅದರ ಕುರಿತು ವಿಚಾರಾತ್ಮಕವಾಗಿ ಚರ್ಚಿಸುವುದು ಮತ್ತು ಹೊಸದೊಂದು ನಿರ್ಣಯದತ್ತ ಸಾಗುವುದು ಈ ಸಮ್ಮೇಳನಗಳ ಉದ್ದೇಶವಾಗಬೇಕು.

ಕನ್ನಡ ಭಾಷೆ ಮತ್ತು ನಾಡಿನ ಉಳಿವು ಮತ್ತು ಬೆಳವಣಿಗೆಗೆ ರಾಜ್ಯದಲ್ಲಿ ಬಹಳಷ್ಟು ಸಂಘಟನೆಗಳು ಹೋರಾಟ ಮಾಡುತ್ತಲೇ ಇರುತ್ತವೆ. ಇಂತಹ ಹೋರಾಟದ ಮುಂದಾಳು ವಾಟಾಳ್ ನಾಗರಾಜ್ ಅವರ ಅತ್ಯಂತ ಹತ್ತಿರದ ಒಡನಾಡಿಯಾಗಿದ್ದ ಕನ್ನಡದ ಕಾರ್ಯಕರ್ತ ನಾ. ಗೋಪಿ ಅವರು ಕುಟುಂಬ ಸಮೇತ ಬದುಕನ್ನು ಕೊನೆಗೊಳಿಸಿದ್ದು ನಮ್ಮೆಲ್ಲರ ದುರಂತ. ಅವರು ಬರೇ ಹೋರಾಟಗಾರರಾಗಿರಲಿಲ್ಲ; ತಮ್ಮ ಬದುಕಿನಲ್ಲೂ ಕನ್ನಡದ ವ್ಯಾಮೋಹವನ್ನು ಹೊಂದಿದ್ದರು. ವೈಯಕ್ತಿಕ ಬದುಕು ದುರಂತವಾಗದಂತೆ ಸಾಮಾಜಿಕ ಹೋರಾಟಗಳು ನಡೆಯಬೇಕು.

ದೆಹಲಿ ಕರ್ನಾಟಕ ಸಂಘದಲ್ಲಿ ನವಂಬರ್ ತಿಂಗಳಿಡೀ ಕನ್ನಡ ಕಾರ್ಯಕ್ರಮಗಳ ಉತ್ಸಾಹ ತುಂಬಿತ್ತು. ಅದು ಮುಂದುವರಿದು ಡಿಸೆಂಬರ್ ತಿಂಗಳಲ್ಲೂ ದೆಹಲಿ ಕನ್ನಡ ಶಾಲೆ, ದೆಹಲಿಯ ಪೋಲೀಸ್ ಗೆಳೆಯರು ಮತ್ತು ಇತರ ಸಂಘ ಸಂಸ್ಥೆಗಳು ಕನ್ನಡದ ಪತಾಕೆಯನ್ನು ದೆಹಲಿಯಲ್ಲಿ ಇನ್ನೂ ಎತ್ತರಕ್ಕೆ ಏರಿಸುವ ಪ್ರಯತ್ನವನ್ನು ಮಾಡುತ್ತಿದ್ದಾರೆ. ಅವರಿಗೆಲ್ಲಾ ಅಭಿನಂದನೆಗಳು.

ದೆಹಲಿಯ ಕನ್ನಡ ಶಾಲೆಯ ಸುಮಾರು 40 ಮಕ್ಕಳಿಗೆ ನಾಡಿನ ಹಿರಿಯ ರಂಗಕರ್ಮಿ ರಾಮಕೃಷ್ಣ ಬೆಳ್ತೂರು ಅವರು ದೆಹಲಿಗೆ ಬಂದು ತರಬೇತಿ ನೀಡಿ 'ಬೊಮ್ಮನ ಹಳ್ಳಿಯ ಕಿಂದರಿ ಜೋಗಿ' ನಾಟಕವನ್ನು ಕರ್ನಾಟಕ ಸಂಘದ ಸಭಾಂಗಣದಲ್ಲಿ ಯಶಸ್ವಿಯಾಗಿ ಪ್ರದರ್ಶಿಸಿದರು. ಮಕ್ಕಳು ಕೂಡಾ ಕೆಲವು ದಿನಗಳ ತರಬೇತಿಯಲ್ಲಿ ಉತ್ತಮ ರಂಗ ಪ್ರದರ್ಶನವನ್ನು ನೀಡಿ ಪ್ರೇಕ್ಷಕರ ಮನಗೆದ್ದಿದ್ದಾರೆ. ನಿರ್ದೇಶಕ ಬೆಳ್ತೂರು ಅವರು ನಾಟಕದ ಸಂದರ್ಭದಲ್ಲಿ ಹೇಳಿದ ಒಂದು ಮಾತು ನಮ್ಮನ್ನೆಲ್ಲಾ ಆಲೋಚಿಸುವಂತೆ ಮಾಡಬೇಕು. ಅದೇನೆಂದರೆ, ಕನ್ನಡಿಗರ ಬಹುತೇಕ ಮಕ್ಕಳಿಗೆ ಕನ್ನಡದ ಪರಿಚಯ ಅಷ್ಟಕಷ್ಟೇ ಎನ್ನುವುದು. ದೆಹಲಿಯಲ್ಲಿ ಕನ್ನಡದ ಉಳಿವು ಮತ್ತು ಬೆಳವಣಿಗೆಗೆ ಒಂದು ಸಂಸ್ಥೆಯಾಗಿ ದೆಹಲಿ ಕರ್ನಾಟಕ ಸಂಘ ಅಥವಾ ಕನ್ನಡ ಶಾಲೆ ಮತ್ತು ಇತರ ಸಂಘ ಸಂಸ್ಥೆಗಳು ಮಾಡುತ್ತಿರುವ ಪ್ರಯತ್ನ ಕಡಿಮೆಯೇನಲ್ಲ. ಆದರೆ ವೈಯಕ್ತಿಕವಾಗಿ ನಾವು ನಮ್ಮ ಮನೆಗಳಲ್ಲಿ ನಮ್ಮ ಭಾಷೆ ಮತ್ತು ಸಂಸ್ಕೃತಿಯ ಪರಂಪರೆಯನ್ನು ಉಳಿಸಿಕೊಳ್ಳುವ ಪ್ರಯತ್ನವನ್ನು ಮಾಡುವಲ್ಲಿ ಸೋತಿದ್ದೇವೆಯೇ ಎನ್ನುವುದು ನಾವೆಲ್ಲಾ ಕೇಳಬೇಕಾದ ಪ್ರಶ್ನೆಯಾಗಿದೆ. ಮುಂದಿನ ದಿನಗಳಲ್ಲಿ, ದೆಹಲಿಯಲ್ಲಿ ಹುಟ್ಟಿ ಬೆಳೆದ ಕನ್ನಡಿಗರ ಮಕ್ಕಳು ಕೂಡ ಕನ್ನಡಿಗರೇ ಆಗಿ ಬೆಳೆಯುವಂತೆ ವೈಯಕ್ತಿಕವಾಗಿ ಹಾಗೂ ಸಾರ್ವಜನಿಕವಾಗಿ ಪರಿಶ್ರಮ ಪಡೋಣ. ಅ

*ವಸಂತ ಶೆಟ್ಟಿ ಬೆಳ್ಳಾರೆ, ಅಧ್ಯಕ್ಷರು*

## ಮುನ್ನೋಟ

ಈಗಾಗಲೇ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಮುಗಿಸಿ ಮುಂದಿನ ವಿಶೇಷ ಕಾರ್ಯಕ್ರಮವಾಗಿ ಡಾ.ಮಾಸ್ತಿ ವೆಂಕಟೇಶ ಅಯ್ಯಂಗಾರ್ ಟ್ರಸ್ಟ್, ಡಿವಿಜಿ ಪ್ರತಿಷ್ಠಾನ ಕೋಲಾರ ಹಾಗೂ ದೆಹಲಿ ಕರ್ನಾಟಕ ಸಂಘದ ಸಂಯುಕ್ತ ಆಶ್ರಯದಲ್ಲಿ ಫೆಬ್ರವರಿ 1 ಮತ್ತು 2, 2014 ರಂದು ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಡಾ. ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಮತ್ತು ಡಿ.ವಿ.ಜಿ ಅವರ ಸಮಗ್ರ ಸಾಹಿತ್ಯ ಅವಲೋಕನ ಸಾಹಿತ್ಯಿಕ ಕಾರ್ಯಕ್ರಮ ಹಾಗೂ ಇವರದೇ ಕೃತಿಗಳ ಆಯ್ದ ಭಾಗಕ್ಕೆ ನೃತ್ಯರೂಪಕಗಳು ಜರುಗಲಿವೆ. ಇದಲ್ಲದೆ ಅಕ್ಕಮಹಾದೇವಿ, ಜಿ.ಎಸ್. ನೆನಪು, ಯುವಕರಿಗಾಗಿ ವಿಶೇಷ ಕಾರ್ಯಕ್ರಮ ಮತ್ತು ಮಹಿಳಾ ವೈವಿಧ್ಯ ಕಾರ್ಯಕ್ರಮ, ಆಟೋಟ ಸ್ಪರ್ಧೆ ಮತ್ತು ವಾರ್ಷಿಕೋತ್ಸವಗಳನ್ನು ಮಾರ್ಚ್ 31ರೊಳಗೆ ನಡೆಸುವ ಬಗ್ಗೆ ಕಾರ್ಯಯೋಜನೆಗಳನ್ನು ಹಾಕಿಕೊಂಡಿದ್ದೇವೆ. ಎಲ್ಲ ಕಾರ್ಯಕ್ರಮದ ಯಶಸ್ವಿಯಲ್ಲಿ ತಾವೆಲ್ಲರೂ ಪಾಲ್ಗೊಳ್ಳಬೇಕಾಗಿ ವಿನಂತಿ. ಗಣರಾಜ್ಯೋತ್ಸವದ ಶುಭಾಶಯದೊಂದಿಗೆ... ಅ

*ಸಿ.ಎಂ.ನಾಗರಾಜ, ಪ್ರಧಾನ ಕಾರ್ಯದರ್ಶಿ*


DELHI KARNATAKA SANGHA
Rao Tularam Marg, Sector-12, R K Puram, New Delhi-110022.
Phone: 011-26109615. 011-65643615 email:dksangha@gmail.com website : www.delhikarnatakasangha.com

# ದೆಹಲಿ ಹಾಫ್ ಮ್ಯಾರಥಾನ್‌ನಲ್ಲಿ ಮೆರೆದ ಕರ್ನಾಟಕದ ಹೆಮ್ಮೆಯ ಯಕ್ಷಗಾನ

ದೆಹಲಿ ಕರ್ನಾಟಕ ಸಂಘದ ಆಶ್ರಯದಲ್ಲಿ ಕರ್ನಾಟಕದ ಹೆಮ್ಮೆಯ ಜಾನಪದ ಕಲೆ ಯಕ್ಷಗಾನದ ವೇಷಧಾರಿಗಳು ಡಿಸೆಂಬರ್ 15ರಂದು ನಡೆದ ದೆಹಲಿ ಹಾಫ್ ಮ್ಯಾರಥಾನ್ ಓಟದಲ್ಲಿ ಭಾಗವಹಿಸಿ ಪ್ರೇಕ್ಷಕರ ಹಾಗೂ ಮಾಧ್ಯಮದ ಗಮನ ಸೆಳೆದರು. ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು ಈ ಪ್ರಯತ್ನದ ಬಗ್ಗೆ ಮಾತನಾಡುತ್ತಾ ದೆಹಲಿ ಕರ್ನಾಟಕ ಸಂಘ ಮತ್ತು ಕರ್ನಾಟಕದ ಕುರಿತು ದೆಹಲಿಯಲ್ಲಿ ಅತ್ಯುತ್ತಮ ಪ್ರತಿಕ್ರಿಯೆ ದೊರಕಿದೆ ಎಂದರು.

ಈ ಛದ್ಮವೇಷದ ಮ್ಯಾರಥಾನ್ ಓಟದ ತಂಡದಲ್ಲಿ ಸಂಘದ ಸದಸ್ಯರಾದ ಸಾಮ್ರಾಟ್ ಗೌಡ, ಅಶ್ವಾಕ್, ರವಿ ಶೆಟ್ಟಿ, ಮಿಥುನ್ ಶೆಟ್ಟಿ ಅವರು ಯಕ್ಷಗಾನದ ವಿವಿಧ ವೇಷವನ್ನು ಮಾಡಿದ್ದರು. ಪ್ರಕಾಶ್ ಶೆಟ್ಟಿ ಉಳೆಪಾಡಿ ಮತ್ತು ಸನ್ಮಾನ್ ಗೌಡ ಅವರಿಗೆ ಸಹಕರಿಸಿದರು.

ರಾಮಾಯಣದಿಂದ ಆಯ್ದ ರಾವಣ ಸಂಹಾರದ ಕೃತಿಯನ್ನು ಪ್ರದರ್ಶಿಸಿದ ಈ ತಂಡವು ಪ್ರಸ್ತುತ ಕಾಲದಲ್ಲಿ ಭ್ರಷ್ಟಾಚಾರವು ರಾವಣನಂತೆ ತಲೆಯೆತ್ತಿ ನಿಂತಿದೆ. ಅದನ್ನು ವಧಿಸುವ ಅಗತ್ಯವಿದೆ ಎನ್ನುವ ಸಂದೇಶವನ್ನು ಯಕ್ಷಗಾನ ಕಲೆಯ ಮುಖಾಂತರ ತೋರಿಸಿದರು ಅ




## ಮಾಲಾ ಹೊನ್ನತ್ತಿ ದಾಖಲೆ

ದೆಹಲಿಯ ಕನ್ನಡತಿ ಮ್ಯಾರಥಾನ್ ಓಟಗಾತಿ ಮಾಲಾ ಹೊನ್ನತ್ತಿ ಅವರು 2 ಗಂಟೆ 6 ನಿಮಿಷ 10 ಸೆಕೆಂಡ್‌ಗಳಲ್ಲಿ ಮ್ಯಾರಾಥಾನ್ ಓಟವನ್ನು ಮುಗಿಸಿ 60–65ರ ವಯಸ್ಸಿನ ಮಹಿಳೆಯರ ಗುಂಪಿನಲ್ಲಿ ಪ್ರಥಮ ಸ್ಥಾನ ಪಡೆದರು.

## ದೆಹಲಿ ಕರ್ನಾಟಕ ಸಂಘದಲ್ಲಿ ತಿಂಗಳ ಕಾರ್ಯಕ್ರಮ

### 1 ಫೆಬ್ರವರಿ 2014

**ಶನಿವಾರ ಸಂಜೆ : 3.00 ಗಂಟೆಗೆ**

**ಡಿವಿಜಿ ಪ್ರತಿಷ್ಠಾನ ಕೋಲಾರ ಹಾಗೂ ದೆಹಲಿ ಕರ್ನಾಟಕ ಸಂಘದ ಸಂಯುಕ್ತ ಆಶ್ರಯದಲ್ಲಿ ಡಿ.ವಿ.ಜಿ. ಸಮಗ್ರ ಸಾಹಿತ್ಯ ಅವಲೋಕನ ಮತ್ತು ಶ್ರೀ ಮೂಡಲ ನಾಟ್ಯ ಕಲಾ ಅಕಾಡೆಮಿ, ಮುಳುಬಾಗಿಲು, ಕೋಲಾರ ಇವರಿಂದ ಡಿವಿಜಿ ಕೃತಿಗಳಿಗೆ ಸಮೂಹ ನೃತ್ಯ**

### 2 ಫೆಬ್ರವರಿ 2014

**ಭಾನುವಾರ ಸಂಜೆ : 5.00 ಗಂಟೆಗೆ**

**ಡಾ. ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಟ್ರಸ್ಟ್ ಹಾಗೂ ದೆಹಲಿ ಕರ್ನಾಟಕ ಸಂಘದ ಸಂಯುಕ್ತ ಆಶ್ರಯದಲ್ಲಿ ಮಾಸ್ತಿ ಸಮಗ್ರ ಸಾಹಿತ್ಯ ಅವಲೋಕನ ಮತ್ತು ಶ್ರೀ ಜಯ ನಾಟ್ಯ ಕಲಾ ಅಕಾಡೆಮಿ ಅವರಿಂದ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಡಾ. ಮಾಸ್ತಿ ವೆಂಕಟೇಶ್ ಅಯ್ಯಂಗಾರ್, ಅವರ ಆಯ್ದ ಕವನಗಳಿಗೆ ನೃತ್ಯರೂಪಕ ಸಾಂಸ್ಕೃತಿಕ ಕಾರ್ಯಕ್ರಮ.**

### ಹಿಂದೂಸ್ತಾನಿ ಸಂಗೀತ

ಪಂಡಿತ್ ಸೋಮನಾಥ್ ಮರಡೂರ್ ಅವರಿಂದ ಹಿಂದೂಸ್ತಾನಿ ಸಂಗೀತ ತರಗತಿಗಳು ಪ್ರತಿ ಭಾನುವಾರ ಬೆಳಿಗ್ಗೆ 11.30ರಿಂದ

### ತಬಲಾ ಕಲಿಕೆ

ಶ್ರೀ ಸುಧೀರ್ ಫಡ್ನೀಸ್ ಅವರಿಂದ ತಬಲಾ ಕಲಿಕೆ ತರಗತಿ ಪ್ರತಿ ಭಾನುವಾರ ಬೆಳಿಗ್ಗೆ 11.30ರಿಂದ.

ಆಸಕ್ತಿಯುಳ್ಳವರು ಸಂಘದ ಕಾರ್ಯಾಲಯವನ್ನು ಸಂಪರ್ಕಿಸಿ : 26109615 / 65643615 8860848584 / 8860848585

### ವೈದ್ಯಕೀಯ ಸಲಹೆಗಳು

**ಡಾ. ಭೀಮ್ ಭಟ್** ಅವರಿಂದ ಉಚಿತ ಆಯುರ್ವೇದ ವೈದ್ಯಕೀಯ ಸಲಹೆ
ಭಾನುವಾರ 26 ಜನವರಿ 2014 ರಂದು
ಸಾಯಂಕಾಲ 4 ಗಂಟೆಯಿಂದ.

**ಡಾ. ನಿರಂಜನ್ ನಾಯ್ಕ್** ಅವರಿಂದ ಕ್ಯಾನ್ಸರ್ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ
ಭಾನುವಾರ 19 ಜನವರಿ 2014ರಂದು
ಬೆಳಿಗ್ಗೆ 10 ಗಂಟೆಯಿಂದ

ದೆಹಲಿ ಕರ್ನಾಟಕ ಸಂಘದ ಸುಸಜ್ಜಿತವಾದ ಆರ್ಟ್ ಗ್ಯಾಲರಿ ಕಲಾ ಪ್ರದರ್ಶನಕ್ಕಾಗಿ ಸಿದ್ಧವಿದೆ. ಹೆಚ್ಚಿನ ಮಾಹಿತಿಗಾಗಿ ದೆಹಲಿ ಕರ್ನಾಟಕ ಸಂಘದ ಕಾರ್ಯಾಲಯವನ್ನು ಸಂಪರ್ಕಿಸಿರಿ. ಫೋನ್ : 8860848584 / 8860848585 – 011–26109615 / 65643615

## ಅವಲೋಕನ

# ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮ




ದೆಹಲಿ ಕರ್ನಾಟಕ ಸಂಘವು ನವೆಂಬರ್‌ನಲ್ಲಿ ನಡೆಸಿದ ರಾಜ್ಯೋತ್ಸವದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ನವೆಂಬರ್ 30ರಂದು ನಡೆದ ಮಕ್ಕಳ ಕಾರ್ಯಕ್ರಮ ವಿಶೇಷವಾಗಿತ್ತು,

ದೆಹಲಿ ಕರ್ನಾಟಕ ಸಂಘದ ಸದಸ್ಯರ ಮಕ್ಕಳಿಗೆ ಕರ್ನಾಟಕದಿಂದ ಕರೆಸಲಾಗಿದ್ದ ತರಬೇತಿದಾರರಿಂದ ನೃತ್ಯ ತರಬೇತಿ ನೀಡಲಾಗಿತ್ತು. ತಿಲಕ್ ಹಾಗೂ ಸಂಜೀವ್ ಮೂರ್ತಿಯವರು ಮಕ್ಕಳಿಗೆ ತರಬೇತಿ ನೀಡಿದರು. ಕೇವಲ ಎರಡು ವಾರಗಳಲ್ಲಿ ಸುಮಾರು 35 ಕನ್ನಡದ ಮಕ್ಕಳಿಂದ ಹತ್ತು ಉತ್ತಮ ನೃತ್ಯ ಕಾರ್ಯಕ್ರಮಗಳನ್ನು ನೀಡುವಂತೆ ತಯಾರು ಮಾಡಿದ್ದು ಶ್ಲಾಘನೀಯ.

ಸಂಘದ ಆವರಣದಲ್ಲಿ ಎರಡು ವಾರಗಳ ಕಾಲ ನಿರಂತರ ತಂದೆ ತಾಯಿಗಳ ಉತ್ಸಾಹ ಮಕ್ಕಳ ಉತ್ಸಾಹದ ಜೊತೆ ಸ್ಪರ್ಧೆ ನಡೆಸಿದಂತಿತ್ತು. ಹಿರಿಯರು ನೀಡಿದ ವಿವಿಧ ಕಾರ್ಯಕ್ರಮಗಳನ್ನು ನವೆಂಬರ್ ಇಪ್ಪತ್ತನಾಲ್ಕರಂದೇ ಆಯೋಜಿಸಲಾಗಿತ್ತು ಆದ್ದರಿಂದ ತಾಯಂದಿರಿಗೆ ಮಕ್ಕಳನ್ನು ವೇಷ ಧರಿಸಿ ನೃತ್ಯ ನೀಡಲು ತಯಾರುಗೊಳಿಸಲು ಅನುಕೂಲ ಮಾಡಿದಂತಾಗಿತ್ತು. ಇದು ಉತ್ತಮ ಗುಣಮಟ್ಟದ ಕಾರ್ಯಕ್ರಮ ನೀಡುವಲ್ಲಿ ಸಹಕಾರಿಯಾಗಿತ್ತು.








ಸಂಘದ ಸಭಾಂಗಣದಲ್ಲಿ ತಮ್ಮ ಮಕ್ಕಳು ನೀಡಿದ ಕಾರ್ಯಕ್ರಮಗಳನ್ನು ವೀಕ್ಷಿಸಿದ ತಂದೆತಾಯಂದಿರು ಆನಂದದಿಂದ ಮಕ್ಕಳ ಛಾಯಾಚಿತ್ರ ತೆಗೆಯಲು ನಡೆಸಿದ ಪ್ರಯತ್ನಗಳು ಮುದನೀಡಿದವು. ಈ ಕಾರ್ಯಕ್ರಮದ ನಿರೂಪಣೆಯನ್ನು ಮಕ್ಕಳಿಂದಲೇ ಮಾಡಿಸಿದ್ದರೆ ಬಹುಷಃ ಇನ್ನೂ ಚೆನ್ನಾಗಿರುತ್ತಿತ್ತು.

ದೆಹಲಿ ಕರ್ನಾಟಕ ಸಂಘ ಬಹು ಮುಖ್ಯವಾಗಿ ಸಾಂಸ್ಕೃತಿಕ ಕೇಂದ್ರವಾಗಿ ಮುಂದುವರಿಯ ಬೇಕೆಂದಾದರೆ ಹೆಚ್ಚು ಹೆಚ್ಚು ಮಕ್ಕಳು ಹಾಗು ಯುವಕರು ಭಾಗವಹಿಸಬಹುದಾದ ಕಾರ್ಯಕ್ರಮಗಳನ್ನು ಮುಂದಿನ ದಿನಗಳಲ್ಲಿ ಕಾರ್ಯಕಾರಿ ಸಮಿತಿ ಆಯೋಜಿಸಲಿ. ದೆಹಲಿಯ ವಿವಿಧ ಶಾಲೆಗಳಲ್ಲಿ ಓದುತ್ತಿರುವ ಕನ್ನಡದ ಮಕ್ಕಳು ಕನ್ನಡ ಕಲಿಯುವಂತಾಗಲಿ. ಇಂಥ ಕಾರ್ಯಕ್ರಮಗಳು ಮಕ್ಕಳ ವ್ಯಕ್ತಿತ್ವದ ಬೆಳವಣಿಗೆಗೆ ಪರೋಕ್ಷವಾಗಿ ಸಹಕಾರಿಯಾಗುತ್ತದೆ. ಅ

***ಚೆನ್ನು ಎಸ್. ಮಠದ***























**ಅವಲೋಕನ**

# ಕನ್ನಡ ಸಾಹಿತ್ಯ ಯಾತ್ರೆ

ದೆಹಲಿಯಲ್ಲಿ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ನವೆಂಬರ್ 24ರಂದು ನಡೆಸಿದ ಸ್ಥಳೀಯ ಕನ್ನಡ ಕಲಾವಿದರ "ಕನ್ನಡ ಸಾಹಿತ್ಯ ಯಾತ್ರೆ"ಯು ಒಂದು ಮಹತ್ವಪೂರ್ಣ ಕಾರ್ಯಕ್ರಮವಾಗಿತ್ತು. ಸುಮಾರು 2000 ವರ್ಷಗಳ ಭವ್ಯ ಐತಿಹಾಸವುಳ್ಳ ಕನ್ನಡ ಸಾಹಿತ್ಯವನ್ನು ಎರಡು ತಾಸುಗಳಲ್ಲಿ ರಂಗದ ಮೇಲೆ ಚಿತ್ರಿಸುವ ಪ್ರಯತ್ನವೇ ಒಂದು ದೊಡ್ಡ ಪಂಥ್ವಾಹ್ವಾನ. ಅದರಲ್ಲೂ ದೆಹಲಿಯ ವಿವಿಧ ಬಡಾವಣೆಗಳಲ್ಲಿ ಚದುರಿದ ಹವ್ಯಾಸಿ ಕಲಾವಿದರನ್ನು ಒಟ್ಟುಗೂಡಿಸಿ, 22 ಪ್ರಸ್ತುತಿಗಳನ್ನು ಒಳಗೊಂಡ ಸಮಗ್ರ ಕಾರ್ಯಕ್ರಮವೊಂದನ್ನು ಏರ್ಪಡಿಸುವುದು ಒಂದು ದಿಟ್ಟ ಪ್ರಯೋಗವೇ ಸರಿ. ಆಯೋಜನೆಯ ವಿವಿಧ ಹಂತಗಳಲ್ಲಿ ಹಲವಾರು ಎಡರು ತೊಡರುಗಳನ್ನು ಎದುರಿಸಿದ ಈ ಕಾರ್ಯಕ್ರಮವು ಅಂತಿಮವಾಗಿ ಯಶಸ್ಸು ಕಂಡಿತು.

ಈ ಕಾರ್ಯಕ್ರಮದ ನಿರ್ವಹಣೆ ಹಾಗೂ ನಿರ್ದೇಶನದ ಜವಾಬ್ದಾರಿಯನ್ನು ವಹಿಸಿದ ಸಿ.ಆರ್. ಪದ್ಮಶ್ರೀ, ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾದಲ್ಲಿ ತರಬೇತಿ ಪಡೆದ ಉದಯೋನ್ಮುಖ ಕಲಾವಿದೆ. ಅವರಿಗೆ ಕನ್ನಡ ಸಾಹಿತ್ಯದ ವಿವಿಧ ಸ್ತರಗಳನ್ನು ಒದಗಿಸುವಲ್ಲಿ ವಿದ್ವಾಂಸ ಡಾ. ಪುರುಷೋತ್ತಮ ಬಿಳಿಮಲೆ ಅವರು ಪೂರ್ಣ ಬೆಂಬಲ ನೀಡಿದರು. ಜನಪದ ಸಾಹಿತ್ಯದಿಂದ ಹಿಡಿದು ಹಳೆಗನ್ನಡದ ಕವಿಗಳು, ದಾಸಪುಂಗವರು, ವಚನಕಾರರು, ತತ್ವಪದಕಾರರು, ನವೋದಯ ಕವಿಗಳು, ನವ್ಯಕವಿಗಳು, ಮಹಿಳಾ ಸಾಹಿತಿಗಳು, ನಾಟಕಕಾರರು ಹಾಗೂ ಬಂಡಾಯ ಸಾಹಿತಿಗಳನ್ನೂ ಪ್ರತಿನಿಧಿಸುವಂತೆ 22 ಪ್ರಸ್ತುತಿಗಳನ್ನು ಈ ಪ್ರದರ್ಶನದಲ್ಲಿ ಆಯ್ದುಕೊಳ್ಳಲಾಗಿತ್ತು.

ಸಾಹಿತ್ಯ ಯಾತ್ರೆಯ ನಿರೂಪಣೆ ವಿಭಿನ್ನ ಬಗೆಯದಾಗಿತ್ತು. ಶಿವಾನಂದ ಇಂಗಳೇಶ್ವರ ಹಾಗೂ ಈ ಲೇಖಕ (ಬಿ.ವಿ. ಅಡ್ಕೋಳಿ) ಪರಸ್ಪರ ಭೇಟಿಯಾಗಿ, ರಾಜ್ಯೋತ್ಸವ ಶುಭಾಶಯಗಳನ್ನು ಕೋರುತ್ತಾ, ಕನ್ನಡ ಸಾಹಿತ್ಯದ ವಿವಿಧ ಮಹಾರಥಿಗಳನ್ನು ಮೆಲುಕು ಹಾಕುತ್ತಾ ಹರಟೆ ಹೊಡೆಯುತ್ತಿದ್ದಂತೇ ವಿವಿಧ ದೃಶ್ಯಾವಳಿಗಳು ರಂಗದ ಮೇಲೆ ಪ್ರಸ್ತುತಗೊಂಡವು. ಕೆಲವೊಮ್ಮೆ ನಿರೂಪಕರೂ ಪಾತ್ರಧಾರಿಗಳಾದರು.

ಕಾರ್ಯಕ್ರಮದ ಮೊದಲನೆ ಘಟ್ಟ ಜನಪದ ಸಾಹಿತ್ಯಕ್ಕೆ ಸಂಬಂಧಪಟ್ಟ ನಾಲ್ಕು ಪ್ರಸ್ತುತಿಗಳು. ನಿರೂಪಕರ ಸಂಭಾಷಣೆಗೆ ನಾಂದಿಯಾಗುವ ಚಿಣ್ಣರ ಆಟದ ದೃಶ್ಯ (ರತ್ತೊ ರತ್ತೊ ರಾಯನ ಮಗಳೆ, ಕಣ್ಣೇ ಮುಚ್ಚೆ ಕಾಡೇಗೂಡೆ) ಪ್ರೇಕ್ಷಕರ ಕುತೂಹಲ ಕೆರಳಿಸುವಲ್ಲಿ ಯಶಸ್ವಿಯಾದರೆ 'ಮುಂಗುಂಡಾದ ಮಾದೇಶ್ವರಗೆ ಶರಣು ಶರಣಯ್ಯ' ಎನ್ನುವ ಜನಪದ ಗೀತೆ ಸುಂದರವಾಗಿ ಮೂಡಿ ಬಂತು.

ಡೊಳ್ಳಿನ ಬಡಿತದ ಹಿನ್ನಲೆ ಸಂಗೀತದಲ್ಲಿ ಬಣ್ಣ ಬಣ್ಣದ ವಸ್ತ್ರ ವಿನ್ಯಾಸದಲ್ಲಿ ಮಿಂಚಿದ ಮಹಿಳೆಯರು 'ಗೋರು ಗೋರುಕನ' ಎಂಬ ನೃತ್ಯ ಪ್ರದರ್ಶಿಸಿದರು. 'ಎಲ್ಲೋ ಜೋಗಪ್ಪ ನಿನ್ನರಮಾನೆ' ಎಂಬ ನೃತ್ಯರೂಪಕ ಸಂಪ್ರದಾಯಸ್ಥ ಮಹಿಳೆಯೋರ್ವಳು ಕಿನ್ನರ ಜೋಗಿಯ ಮೋಡಿಗೆ ಬಲಿಯಾಗಿ, ತನ್ನ ಸರ್ವಸ್ವ ಬಿಟ್ಟು ತೊಲಗಿ ಕೊನೆಯಲ್ಲಿ ಭ್ರಮನಿರಸನಗೊಳ್ಳುವ ಹೃದಯಸ್ಪರ್ಶಿ ಚಿತ್ರಣವನ್ನು ಆಶಾಲತಾ ಮಹದೇವ ಮತ್ತು ಶಿವಪ್ಪ ಅವರು ಎಸ್. ಕುಮಾರ ಮತ್ತು ಸಂಗಡಿಗರ ಹಿಮ್ಮೇಳದಲ್ಲಿ ನೀಡಿದರು.

ಹಳೆಗನ್ನಡದ ಕಂಪನ್ನು ಸೂಸಲು ಆದಿಕವಿ ಪಂಪನ ಹಾಗೂ ಕುಮಾರವ್ಯಾಸನ ಕೆಲವು ಪಂಕ್ತಿಗಳನ್ನು ಗಮಕರೂಪದಲ್ಲಿ ಪ್ರಸ್ತುತಪಡಿಸಿದವರು ಜಮುನಾ ಮಠದ. ರಾಘವಾಂಕನ ಕಾಲದಲ್ಲಿಯ ಸಾಮಾಜಿಕ ಪರಿಸ್ಥಿತಿಯ ವಿಡಂಬನೆಯನ್ನು 'ಗಾನರಾಣಿ' ಎಂಬ ಸಂವಾದ ಗೀತೆಯ ಮೂಲಕ ಪ್ರಸ್ತುತಪಡಿಸಿದವರು ಎಚ್.ಜಿ. ಶಿವರಾಮ್ ಮತ್ತು ಮಂಜುಳಾ ನಾಗರಾಜ. ಹಳೆಗನ್ನಡದ ಕಾವ್ಯ ಪಂಕ್ತಿಗಳು ನಮ್ಮ ಪ್ರೇಕ್ಷಕರಿಗೆ 'ಕಬ್ಬಿಣದ ಕಡಲೆ'ಯಾಗಿದ್ದರೆ ಆಶ್ಚರ್ಯವಲ್ಲ.

ದಾಸ ಸಾಹಿತ್ಯ ಕನ್ನಡ ಸಾಹಿತ್ಯದ ಇನ್ನೊಂದು ಅಮೂಲ್ಯ ಕೊಡುಗೆ. ಪ್ರಾಪಂಚಿಕ ಸುಖಭೋಗಗಳನ್ನು ತ್ಯಾಗ ಮಾಡಿ, ಊರೂರು ಸುತ್ತುತ್ತಾ ಹರಿಕಥೆಗಳ ಮೂಲಕ, ಸಮಾಜದಲ್ಲಡಗಿದ ಢಾಂಬಿಕತೆ ಹಾಗೂ ಮೌಢ್ಯತೆಗಳನ್ನು ಖಂಡಿಸಿದ ದಾಸರ ಪಂಕ್ತಿಯಲ್ಲಿ ಪುರಂದರದಾಸರು ಹಾಗೂ ಕನಕದಾಸರು ಅಗ್ರಗಣ್ಯರು. ಅವರ ಬೋಧನೆಗಳನ್ನು ಒಂದು ಪದ್ಯಮಾಲೆಯ ರೂಪದಲ್ಲಿ ಪೋಣಿಸುವ ಪ್ರಯತ್ನವೇ ದಾಸರ ಪದವೆಂಬ ಲಘುಪ್ರಹಸನವಾಗಿತ್ತು.

ಊರಿನ ಮುಖ್ಯಸ್ಥ ಪಾಟೀಲರು, ಢಂಬಾಚಾರದ ಪ್ರತೀಕವಾದ ಗುಂಡಾ ಜೋಯ್ಸರು, ಮುಗ್ಧ ಜೀತದಾಳು ಹುಲಿಯ ಹಾಗೂ ದಾಸರು ಈ ವ್ಯಕ್ತಿಗಳ ಸುತ್ತ ಹೆಣೆದ ಈ ಲಘುನಾಟಕ ಉತ್ತಮ ಅಭಿನಯ ಹಾಗೂ ಸಂಭಾಷಣೆಗಳ ಮೂಲಕ ಪ್ರೇಕ್ಷಕರ ಮನಸೆಳೆಯಿತು.

ಕನ್ನಡ ಸಾಹಿತ್ಯದ ಇನ್ನೊಂದು ಮಹತ್ತರ ಘಟ್ಟ–ವಚನ ಸಾಹಿತ್ಯ. ಸಮಾಜದಲ್ಲಿ ಜಡ್ಡುಗಟ್ಟಿದ ಕಂದಾಚಾರ, ಜಾತಿ ವ್ಯವಸ್ಥೆ ವಿರುದ್ಧ ಸಿಡಿದೆದ್ದು, ಹೊಸ ಕ್ರಾಂತಿಯ ಅಲೆ ಎಬ್ಬಿಸಿದ್ದಷ್ಟೇ ಅಲ್ಲದೆ, ಪುರುಷ ಕೇಂದ್ರಿತ ಸಮಾಜ ವ್ಯವಸ್ಥೆಯಲ್ಲಿ ಅವಹೇಳನಕ್ಕೆ ಒಳಗಾಗಿದ್ದ ಮಹಿಳೆಯರ



ಪರವಾಗಿ ಧ್ವನಿ ಎತ್ತಿದ ಶಿವಶರಣೆಯರ ಕೊಡುಗೆ ಬಹುಮೂಲ್ಯವಾದದ್ದು. ವಚನ ಸಾಹಿತ್ಯವನ್ನು ಪ್ರತಿನಿಧಿಸಲು ಎರಡು ಪ್ರಸ್ತುತಿಗಳನ್ನು ರಂಗದ ಮುಂದಿಡಲಾಯಿತು. ಮೊದಲನೆಯದು "ನಿಮ್ಮ ಶರಣರಿಗೆ ಶರಣೆಂಬುದು" ಎಂಬ ಸಮೂಹ ನೃತ್ಯ. ಎರಡನೆಯದು ಅಕ್ಕಮಹಾದೇವಿಯ ಚರಿತ್ರೆ ಆಧಾರಿತ "ಅಕ್ಕ ಕೇಳವ್ವ ನಾನೊಂದು ಕನಸ ಕಂಡೆ" ಎಂಬ ನೃತ್ಯರೂಪಕ. ಈ ಪ್ರಸ್ತುತಿ ಸ್ಥಳೀಯ ಮಹಿಳಾ ಕಲಾವಿದೆಯರ ಪ್ರತಿಭೆಯನ್ನು ಹೊರತರುವಲ್ಲಿ ಯಶಸ್ವಿಯಾದದ್ದಷ್ಟೇ ಅಲ್ಲದೆ ಪದ್ಮಶ್ರೀ ಹಾಗೂ ಮನೀಶ್ ಇವರ ಸುಂದರ ಕೋರಿಯೋಗ್ರಾಫಿಯ ಉದಾಹರಣೆ ಕೂಡಾ. ಪ್ರತಿ ಸಾಲನ್ನು ದೃಶ್ಯಗಳ ಮೂಲಕ ತೆರೆದಿಟ್ಟ ಈ ನೃತ್ಯರೂಪಕ ಸಮಗ್ರ ಯಾತ್ರೆಗೆ ಒಂದು ಕಳಸವಿಟ್ಟಂತಿತ್ತು.

ಕನ್ನಡ ಸಾಹಿತ್ಯದ ಇನ್ನೊಂದು ಮೈಲಿಗಲ್ಲು 19ನೇ ಶತಮಾನದ ವಸಾಹತು ರಾಜ್ಯದ ಪ್ರತಿಕ್ರಿಯೆಯಾಗಿ ಮೂಡಿಬಂದ 'ತತ್ವಪದ ಕಾರರ' ಉದಯ. ಅದರಲ್ಲೂ ಹಿಂದೂ-ಮುಸ್ಲಿಂ ಭಾವೈಕ್ಯತೆಯ ಪ್ರತೀಕವಾದ ಸಂತ ಶಿಶುನಾಳ ಶರೀಫರನ್ನು ಪ್ರತಿನಿಧಿಸುವ ಪ್ರಸ್ತುತಿ 'ಕೋಡಗನ ಕೋಳಿ ನುಂಗಿತ್ತ" ಎಂಬ ಸಮೂಹ ನೃತ್ಯ ಚೇತೋಹಾರಿಯಾಗಿತ್ತು. ಸಾಹಿತ್ಯ ಯಾತ್ರೆ 20ನೇ ಶತಮಾನಕ್ಕೆ ತಲುಪಿದಂತೆ ನವೋದಯ ಕಾವ್ಯ ಉದಯಿಸಿತು.

ಇಂಗ್ಲಿಷ್ ರೊಮ್ಯಾಂಟಿಕ್ ಕಾವ್ಯದಿಂದ ಪ್ರಭಾವಿತರಾದ ಬಿ.ಎಂ. ಶ್ರೀಕಂಠಯ್ಯ, ಕುಡುಕನ ಭಾಷೆಯನ್ನು ಬಳಸಿ ಕನ್ನಡ ಪ್ರೇಮವನ್ನು ಮೆರೆದ ಜಿ.ಪಿ. ರಾಜರತ್ನಂ, ಪ್ರಕೃತಿ ಚಿತ್ರಣದಲ್ಲಿ ಪರಾಕಾಷ್ಠತೆ ಸಾಧಿಸಿ, ವಿಶ್ವಮಾನವತೆ ಸಾರಿದ ರಾಷ್ಟ್ರಕವಿ ಕುವೆಂಪು, ಮಾತಿನ ಮಾಯಾಜಾಲದಲ್ಲಿ ಮೋಡಿ ಮಾಡಿದ ಉನ್ನತ್ತ ಕವಿ ದ.ರಾ. ಬೇಂದ್ರೆ, ದಾಂಪತ್ಯ ಜೀವನದ ಒಳಹೊಕ್ಕ 'ಮೈಸೂರು ಮಲ್ಲಿಗೆ'ಯ ಸೌರಭ ಸೂಸಿದ ಕೆ.ಎಸ್. ನರಸಿಂಹಸ್ವಾಮಿ- ಇವರೆಲ್ಲರ ಕೃತಿಗಳನ್ನು ಸಮರ್ಪಕ ರೀತಿಯಲ್ಲಿ ರಂಗದ ಮೇಲೆ ತಂದದ್ದು ಸಾಹಿತ್ಯ ಯಾತ್ರೆಯ ಪ್ರಶಂಸನೀಯ ಸಾಹಸ.





"ಆನಂದಮಯ ಈ ಜಗದುದಯ" ಧ್ವನಿ ಸುರುಳಿಗೆ ಐಶ್ವರ್ಯ ನಾಯಕ್ ಮತ್ತು ಸವಿತಾ ತಮ್ಮ ಭರತನಾಟ್ಯದ ಪ್ರಾವೀಣ್ಯತೆಯನ್ನು ಪ್ರದರ್ಶಿಸಿದರೆ, "ರಾಯರು ಬಂದರು" ಈ ನೃತ್ಯರೂಪಕ ಉತ್ತಮ ಅಭಿನಯ ಹಾಗೂ ಸೃಜನಾತ್ಮಕ ಕೋರಿಯೋಗ್ರಾಫಿಯಿಂದ ಪ್ರೇಕ್ಷಕರ ಮನಸೆಳೆಯಿತು. "ಕುಣಿಯೋಣು ಬಾರಾ"ದಲ್ಲಿನ ಅರ್ಥಪೂರ್ಣ ಕುಣಿತ ಪ್ರೇಕ್ಷಕರನ್ನು ಕುಣಿಸಿದರೆ, ಕುಮಾರರು ಹಾಡಿದ "ಹೆಂಡಾ ಹೆಂಡ್ತಿ ಕನ್ನಡ ಪದಗೋಳ" ಹಾಡಿಗೆ ಪ್ರಕಾಶ ಯಾದವಾಡಕರ್ ಪ್ರೇಕ್ಷಕರು ಸಿಳ್ಳು ಹಾಕುವಂತೆ ಕುಣಿದು ಕುಪ್ಪಳಿಸಿದರು.

ಕನ್ನಡ ಸಾಹಿತ್ಯದ ಮುಂದಿನ ಘಟ್ಟ ನವ್ಯಸಾಹಿತ್ಯದ ಉಗಮ. ನವ್ಯ ಮಾರ್ಗದಲ್ಲಿ ಹೊಸ ಬಗೆಯ ಕ್ರಾಂತಿಯನ್ನು ಮೂಡಿಸಿದ ಕವಿ ಗೋಪಾಲಕೃಷ್ಣ ಅಡಿಗರು. ಅವರ ಭೂಮಿಗೀತದ "ಮಲೆಘಟ್ಟ ಸೋಪಾನ ಕೆಳಪಟ್ಟಿಯಲಿ" ಎಂಬ ಪಂಕ್ತಿಗಳನ್ನೂ ಅರ್ಥಪೂರ್ಣವಾಗಿ ತೆರೆದಿಟ್ಟವರು ಡಾ. ಪುರುಷೋತ್ತಮ ಬಿಳಿಮಲೆ.

ಹೊಸಕನ್ನಡ ಸಾಹಿತ್ಯದಲ್ಲಿ ಮಹಿಳೆಯ ಪರ ಧ್ವನಿ ಎತ್ತಿದ ಮಹಿಳಾ ಸಾಹಿತಿಗಳ ಪಂಕ್ತಿಯಲ್ಲಿ ಕೇಂದ್ರ ಸಾಹಿತ್ಯ ಪ್ರಶಸ್ತಿ ಗಳಿಸಿದ ವೈದೇಹಿ ಗಮನಾರ್ಹರು. ಅವರ ಪ್ರಮುಖ ಕೃತಿ 'ಅಡುಗೆ ಮನೆಹುಡುಗಿ".

ಆಧುನಿಕ ಯುವತಿಯ ಆಂತರಿಕ ಆಸೆ, ಆಕಾಂಕ್ಷೆಗಳನ್ನು ದಿಟ್ಟವಾಗಿ ಅಭಿವ್ಯಕ್ತಿಸಿದ ಇನ್ನೋರ್ವ ಸಾಹಿತಿ ನಳಿನಿ ದೇಶಪಾಂಡೆ. ಅವರ 'ಲಾಂಬ್ರೆಟ ವೆಸ್ಪ' ಕವನ ಗಂಡಸರನ್ನು ಬೆಚ್ಚುಬೀಳಿಸುವ ಕೃತಿ. ಇವೆರಡು ಕೃತಿಗಳನ್ನು ವಿಶಿಷ್ಟವಾಗಿ ಕವಿತಾ ವಾಚನ ಹಾಗೂ ಕಣ್ಣು ಕಟ್ಟುವ ಅಭಿನಯದ ಮೂಲಕ ತರುವ ಪ್ರಯತ್ನ ಶ್ಲಾಘನೀಯವಾದರೂ 'ಮೈಕ್ ಫೇಲ್ಯೂರ್' ಮೂಲಕ ಅವು ಪ್ರೇಕ್ಷಕರಿಗೆ ಮನಮುಟ್ಟಲಿಲ್ಲ.

ಕನ್ನಡ ಸಾಹಿತ್ಯದಲ್ಲಿ ನಾಟಕ ರಂಗದ ಕೊಡುಗೆ ಮರೆಯಲು ಸಾಧ್ಯವೆ? ಇಂಗ್ಲಿಷ್‌ನಿಂದ ಪ್ರಭಾವಿತರಾಗಿ ಕನ್ನಡ ಆಧುನಿಕ ನಾಟಕಗಳಿಗೆ ನಾಂದಿ ಹಾಡಿದ ಟಿಪಿಕಲ್ ಟಿ.ಪಿ. ಕೈಲಾಸಂ- ಅವರ ವ್ಯಂಗದ ಕೆಲ ಉದಾಹರಣೆ ಹಾಗೂ ಅಪೂರ್ಣ ಮನುಷ್ಯನು ಪೂರ್ಣತೆಗಾಗಿ ಹಂಬಲಿಸುವ ಪ್ರಕ್ರಿಯೆಯನ್ನು ಸಮರ್ಥವಾಗಿ ಬಳಸಿಕೊಂಡು ನಾಟಕರಂಗದಲ್ಲಿ ಹೊಸ ಅಲೆ ಎಬ್ಬಿಸಿದ ಗಿರೀಶ್ ಕಾರ್ನಾಡ ಅವರ ಕೃತಿ ತುಘಲಕ್-ಇವುಗಳ ದೃಶ್ಯಗಳನ್ನು ಪ್ರಸ್ತುತಪಡಿಸಲಾಯಿತು.

ಸಾಹಿತ್ಯ ಯಾತ್ರೆಯ ಅಂತಿಮಘಟ್ಟ ಬಂಡಾಯ ಸಾಹಿತ್ಯ. ಇವರ ಮುಖ್ಯ ಉದಾಹರಣೆ ರೂಪದಲ್ಲಿ ಸಿದ್ದಲಿಂಗಯ್ಯನವರ ಕ್ರಾಂತಿಕಾರಕ ರಚನೆ "ನನ್ನ ಜನಗಳು-ಹಸಿವಿನಿಂದ ಸತ್ತೋರು, ಸೈಜುಗಲ್ಲು ಹೊತ್ತೋರು". ಈ ಸಮೂಹ ಗಾಯನ ಸಾಹಿತ್ಯ ಯಾತ್ರೆಗೆ ಅಂತಿಮ ವಿರಾಮ ಹಾಕಿತು.

ಸಾಹಿತ್ಯ ಯಾತ್ರೆ ಒಂದು ಯಶಸ್ವೀ ಕಾರ್ಯಕ್ರಮ ಎನ್ನುವುದಾದರೆ ಅದರ ಸಫಲತೆಗೆ ಕಾರಣ ಹಲವಾರು. ತಿಂಗಳುಗಟ್ಟಲೆ ಹಗಲಿರುಳು ದುಡಿದು ಕಲಾವಿದರಿಗೆ ತರಬೇತಿ ನೀಡಿದ ನಿರ್ದೇಶಕಿ ಸಿ.ಆರ್. ಪದ್ಮಶ್ರೀ, ಅವರ ಹೆಗಲಿಗೆ ಹೆಗಲುಕೊಟ್ಟು ದುಡಿದು ಬೆಳಕಿನ ಸಂಯೋಜನೆ ನೀಡಿದ ಮನೀಶ್, ಹಗಲು ರಾತ್ರಿ ಓಡಾಡಿಕೊಂಡು ಎಲ್ಲರೊಳಗೊಂದಾದ ವಿನೋದ, ಆಪದ್ಬಾಂಧವರಾಗಿ ಸಹಾಯ ನೀಡಿದ ಶಿವಾನಂದ ಇಂಗಳೇಶ್ವರ, ಸಂಗೀತದ ಸಾರಥ್ಯ ಹೊತ್ತ ಭೀಮಸೇನ ಭಜಂತ್ರಿ, ಅವರ ಜೊತೆಗೆ ಸುಧೀರ್ ಫಡ್ನೀಸ್, ವಸ್ತ್ರ ವಿನ್ಯಾಸ, ಮೇಕಪ್, ರಂಗ ಸಜ್ಜಿಕೆಯಲ್ಲಿ ಸಹಾಯ ನೀಡಿದ ಚೆನ್ನು ಎಸ್. ಮಠದ, ಗುರುಚರಣ್, ಸಂಘದ ಸಿಬ್ಬಂದಿ ವರ್ಗ, ಮೂರು ವಾರ ಅಡಿಗೆ ಮನೆ, ಮಕ್ಕಳು, ಕೆಲಸ ಬೊಗಸೆಗಳನ್ನು ಬದಿಗೊತ್ತಿ, ಉತ್ಸಾಹದಿಂದ ಭಾಗವಹಿಸಿದ ತಂಗಿಯರು, ತಮ್ಮಂದಿರು ಹಾಗೂ ಸಂದಿಗ್ಧ ಪರಿಸ್ಥಿತಿಯಲ್ಲಿಯೂ ಕೂಡ ಧೃತಿಗೆಡದೆ ಪೂರ್ಣ ಬೆಂಬಲ ನೀಡಿ ಕೊನೆಯಲ್ಲಿ ಯಶಸ್ಸಿನ ಅಂಕಗಳನ್ನೂ ಗಿಟ್ಟಿಸಿದ ಕರ್ನಾಟಕ ಸಂಘದ ಅಧ್ಯಕ್ಷರು ಹಾಗೂ ಬೆಂಬಲಿಗರು. ಅ

***ಡಾ. ಬಿ.ವಿ. ಅಡ್ಕೋಳಿ***

# ಅಡವಾನ್ಸ್ ಟ್ಯಾಕ್ಸ್?

"ದೀಪಾವಳಿ ಬರ್ತಾ ಇದೆ ಅಂದ್ರೆ ಆಯ್ತು ನೋಡಿ... ಅಬ್ಬಾಬ್ಬಾ.. ಮೈ ಮೇಲೆ ಮುಳ್ಳು ಬರುತ್ತೆ ಕಣ್ರೀ" ಅನ್ನೋವ್ರಲ್ಲಿ ಇತ್ತೀಚೆಗೆ ನಾವೂ ಒಬ್ರು ಅಂದ್ರೆ ತಪ್ಪಾಗಲಾರದು. ಎಷ್ಟೆಲ್ಲಾ ಉಳಿತಾಯ ಮಾಡಿದ್ರೂನೂ ಸಿಕ್ಕಾ ಪಟ್ಟೆ ಬೆಲೆ ಏರಿಕೆಯಿಂದಾಗಿ ದಿನಾಲೂ ದಿವಾಳಿ ಆಗ್ತಾ ಇದ್ದೀವಲ್ಲ?

ಅಂದ ಹಾಗೆ ಮೊನ್ನೆ ನಮ್ಮೆಜಮಾನ್ರ ಸ್ನೇಹಿತರ ಗೃಹಪವೇಶಕ್ಕೆ ಹೋಗಿದ್ವಿ. ಎಲ್ಲಿ ನೋಡಿದ್ರೂ ಹೊಸ ಮುಖಗಳೇ. ಹೂಂ.. ನಾನು ಒಳಗೆ, ನಮ್ಮವರು ಹೊರಗೆ. ಒಂದು ಸ್ಮೈಲ್ ಕೊಟ್ಟು ಯಾರಾದ್ರೂ ಸಿಗ್ತಾರೇನೋ ಅಂತ ನೋಡಿದ್ರೆ. ಊಹೂಂ.. ಎಲ್ಲರೂ ತಂತಮ್ಮಲ್ಲೇ ಬಿಸಿ. ಯಾವಾಗಪ್ಪಾ ಊಟಕ್ಕೆ ಹಾಕ್ತಾರೇಂತ ಕಾಯ್ತಾ ಇದ್ದೆ. ಕೊನೆಗೆ " ರೀ ಊಟಕಿನ್ನೂ ತಡ, ಹೋಗೋಣ್ವಾ?" ಅಂತ ಇವರಿಗೆ ಫೋನ್ ಮಾಡಿದ್ರೆ "ಇಟ್ಸ್ ಓಕೆ. ಬಂದಿದ್ದೀವಿ ಅಂದ ಮೇಲೆ ಊಟ ಮುಗಿಸೇ ಹೋಗೋಣಾ" ಅಂದ್ರು. ಇದೇನಪ್ಪಾ ಇವತ್ತು ಹೊಸ ರಾಗ ಅಂತ ಬಗ್ಗಿ ನೋಡಿದ್ರೆ ನಮ್ಮ ಸಾಹೇಬ್ರು ಯಾರದ್ದೋ ಜೊತೆ ಹರಟುತ್ತಾ ಕೂತಿದ್ದು ಕಾಣಿಸ್ತು. ಆಯ್ತಲ್ಲ. ಹಳೇ ಗೆಳೆಯರು ಸಿಕ್ರು. ಅದಕ್ಕೆ ನನ್ನನ್ನ ಮರತೇ ಬಿಟ್ರು!

ಅಲ್ಲೇ ಸ್ವಲ್ಪ ದೂರದಲ್ಲಿ ಕುಳಿತು ಹರಟೆ ಹೊಡೆಯುತ್ತಿದ್ದ ಇಬ್ಬರು ಗೆಳತಿಯರ ಮಾತುಗಳು ಬೇಡ ಬೇಡವೆಂದರೂ ನನ್ನ ಕಿವಿಗೆ ಬಿದ್ದವು. ತುಂಬಾ ದಿನಗಳ ನಂತರ ಭೇಟಿಯಾಗಿದ್ರೂಂತ ಕಾಣಿಸುತ್ತೆ. ತಮ್ಮ ಮನೆಯ ಎಲ್ಲಾ ಸುದ್ದಿಯನ್ನ ಚಾಚೂ ತಪ್ಪದೆ ಹೇಳಿಕೊಳ್ತಾ ಇದ್ದುದ್ದನ್ನ ನೋಡಿ ನನಗೂ ಮಾತನಾಡಬೇಕೆನಿಸ್ತಾ ಇತ್ತು. ಆದ್ರೆ ನನ್ನ ಕಡೆಗೆ ಅವ್ರು ನೋಡ್ಲೇ ಇಲ್ಲ. ಬೆಪ್ಪಳ ಹಾಗೆ ಕೇಳ್ತಾ ಕೂತೆ.


ಅವರಲ್ಲಿ ಒಬ್ಬರು "ರೀ ಗೀತಾ, ದೀಪಾವಳಿ ಜೋರಾ? ನೋಡಿ. ಈ ಬಾರಿ ನಾನಂತೂ ಡಿಜೈನರ್ ಸೀರೇನೇ ಕೊಂಡುಕೋತೀನಿ. ಯಾವಾಗ್ಲೂ ಜರತಾರಿ ರೇಶ್ಮೆ ಸೀರೆ ಉಟ್ಟೂ, ಉಟ್ಟೂ ಬೇಸ್ರ ಬಂದುಬಿಟ್ಟಿದೆರೀ' ಅಂದ್ರೆ " ಅಯ್ಯೋ, ತುಂಬಾ ದುಬಾರಿ ಕಣ್ರೀ ಆ ಡಿಜೈನರ್ ಸೀರೆಗಳು. ಮತ್ತೆ ದಿನಕ್ಕೊಂದು ಫ್ಯಾಷನ್ನು, ಡಿಜೈನು ಬದಲಾಗ್ತಾ ಇರುತ್ತೆ. ಸುಮ್ನೆ ಕಾಂಜೀವರಮ್ಮೋ ಇಲ್ಲಾ ಧರ್ಮಾವರಮ್ಮೋ ಕೊಂಡ್ಕೊಳ್ಳಿ. ಅವು ಫಾರ್ ಎವರ್ ಸಾರೀಜು " ಅಂದ್ರು. ನನಗೂ ಇವ್ರ ಮಾತಿನಲ್ಲಿ ದಮ್ಮಿದೆ ಅನಿಸ್ತು. ಇನ್ನಷ್ಟು ಕಿವಿ ಉದ್ದಕ್ಕೆ ಬಿಟ್ಟೆ.

"ಅಲ್ಲಾರೀ ಗೀತಾ, ನೀವಂತೂ ತುಂಬಾ ಲಕ್ಕೀ ಕಣ್ರಿ. ಮಗಳನ್ನ ಇಂಜಿನಿಯರ್ ಮಾಡಿಸಿದ್ದೂ ಆಯ್ತು. ಅವಳಿಗೆ ತಕ್ಕ ವರ ತಂತಾನೇ ಹುಡುಕಿಕೊಂಡು ಮನೇವರೆಗೆ ಬಂದದ್ದೂ ಆಯ್ತು. ಭಾರೀ ಅದೃಷ್ಟವಂತರು! ಮತ್ತೆ ಮದ್ವೆ ಯಾವಾಗ?" ಅದಕ್ಕೆ ಆಕೆ ನಿರಾಕ್ತಿಯಿಂದ "ಮೇ ತಿಂಗಳಲ್ಲಿ. ಹೂಂ, ಹೌದುರೀ, ಎಲ್ಲಾ ನಮ್ಮ ಅದೃಷ್ಟಾನೇ ಅನ್ನಬೇಕು" ಅಂದ್ರು. ಆಶ್ಚರ್ಯದಿಂದ " ಯಾಕ್ರೀ ಗೀತಾ, ಏನಾಯ್ತು?" ಇಷ್ಟು ಕೇಳಿದ್ದೇ ಸಾಕು ನೋಡಿ, ಗೀತಾಯಣ ಶುರುವಾಯ್ತು. ನೀವೇ ಹೇಳಿ, ಕೇಳೋವ್ರಿದ್ದಾಗ ತಾನೇ ಹೇಳೋಕೆ ಮಜಾ ಬರೋದು? ಸರಿ ಏನು ಹೇಳ್ತಾರೇಂತ ನಾನೂ ಸ್ವಲ್ಪ ಅತ್ತ ಜರುಗಿದೆ.

"ರಮ್ಯಾ, ನಮ್ಮ ಗೌರಿಗೆ ನಮ್ಮ ಒಳ್ಳೇ ಮನೆತನ ಸಿಕ್ಕಿದೇಂತ ಭಾರೀ ಖುಷಿಯಲ್ಲಿದ್ವಿ. ನಮ್ಮದೇನೂ ಡಿಮಾಂಡ್ ಇಲ್ಲ, ನಿಮ್ಮ ಮಗಳಿಗೇನು ಕೊಡಬೇಕು ಅನಿಸುತ್ತೋ ಅದನ್ನಷ್ಟೇ ಹಾಕಿದ್ರೆ ಸಾಕು ಅಂದಿದ್ರು. ನಮಗಂತೂ ತುಂಬಾ ಸಮಾಧಾನ ಆಗಿತ್ತು. ಒಳ್ಳೇ ಮನೆತನ, ವಿದ್ಯಾವಂತ ತಂದೆ ತಾಯಿ, ಹೀರೋನ ತರಹ ಕಾಣಿಸುವ ಅಳಿಯ, ಮತ್ತೆ ಒಬ್ಬನೇ ಮಗ, ಇನ್ನೇನು ಬೇಕು ಹೇಳಿ? ನಾವು ಮಾಡೋದೆಲ್ಲಾ ಇರೋ ಇಬ್ಬರು ಹೆಣ್ಣು ಮಕ್ಕಳಿಗೆ ತಾನೆ?" ಅದಕ್ಕೆ "ಹೌದುರೀ ಗೀತಾ, ಮುಂದೆ?" ಸೆರಗನ್ನು ಸೊಂಟಕ್ಕೆ ಕಟ್ಟುತ್ತಾ, "ಹೂಂ. ಕೇಳಿ ಮತ್ತೆ, ಮೊನ್ನೆ ಗೌತಮನ ಸೋದರತ್ತೆ ಮತ್ತು ಚಿಕ್ಕಮ್ಮ ಬಂದಿದ್ರು. ಶುರುವಾಯ್ತು ನೋಡಿ ಅವರ ಡಿಮಾಂಡು" ಅಂದ್ರು ರಮ್ಯಾ ದೊಡ್ಡ ಕಣ್ಣುಗಳನ್ನು ತಿರುಗಿಸುತ್ತಾ. "ಓ.. ಏನಂತೆ ಅವ್ರ ಡಿಮಾಂಡು?" " ಏನಿಲ್ಲಾ.. ಇರೋನು ಒಬ್ಬನೇ ಮಗ. ಮದ್ವೆ ಆಗಿ ಮುಂದೆ ವಿದೇಶಕ್ಕೆ ಏನಾದ್ರೂ ಹೋದ್ರೆ? ಆಗ ನಮ್ಮ ಅತ್ತಿಗೆಗೆ ಯಾವ ಹಬ್ಬಾನೂ ಆಚರಿಸೋಕೆ ಆಗೋದಿಲ್ಲಾ ಅಲ್ವೆ ಪಾಪ, ನಾವೆಲ್ಲಾರೂ ಹೇಗೂ ದೆಹಲಿ ನೋಡೋಕೇಂತ ಬಂದಿದ್ದೀವಿ. ಅದಕ್ಕೆ ನೀವು ಈ ಸಲಾನೇ ದೀಪಾವಳಿ ಹಬ್ಬಾ ಮಾಡಿ ಬಿಡಿ' ಅಂದ್ರಮ್ಮಾ ರಮ್ಯಾ." " ಹಾಂ.. ಇದ್ಯಾವ ಸೀಮೆ ಜನಾರೀ? ಮದುವೆಗೆ ಇನ್ನೂ ಆರು ತಿಂಗಳು ಇದೆ!" ಅದಕ್ಕೆ "ಅಯ್ಯೋ ಸೀಮೆಗೀಮೆ ಹೋಗ್ಲಿ, ಎಲ್ಲರಿಗೆ ಏನೇನು ಕೊಡಬೇಕೂಂತ ಒಂದು ಉದ್ದದ ಲಿಸ್ಟು ಬೇರೆ ಕೊಟ್ರು. ಎಲ್ಲರಿಗೂ ಡಿಸೈನರ್ ಸೀರೆಗಳೇ ಬೇಕಂತೆ. ಒಬ್ಬರಿಗೆ ರಿತು ಕುಮಾರದ್ದಂತೆ, ಇನ್ನೊಬ್ಬರಿಗೆ ಸತ್ಯಾ ಪೌಲ್ ಮತ್ತೆ ಚಿಕ್ಕವಳಿಗೆ ಮಸಾಬಾ ಗುಪ್ತಾಳ ಡಿಸೈನರ್ ಸೀರೇನೇ ಕೊಡಬೇಕಂತೆ. ನಾನು ಡೆಲ್ಲೀಲೇ ಇದ್ರೂನೂ ಮೊದಲಿನವ್ರು ಹೆಸರು ಕೇಳಿ ಗೊತ್ತು, ಈ ಮಾಸಾಬಾ– ಗೀಸಾಬಾ ಯಾರೋ ಆ ದೇವ್ರಿಗೇ ಗೊತ್ತು" ಅದಕ್ಕೆ ರಮ್ಯಾ ನಗುತ್ತ "ಗೀತಾ, ಮಾಸಾಬಾ ನಮ್ಮ ಹಿಂದಿ ಸೀರಿಯಲ್ಲಿನ ನೀನಾ ಗುಪ್ತಾಳ ಮಗಳು ಕಣ್ರಿ" ಅಂದ್ಲು ಭಾರೀ ಗೊತ್ತಿದ್ದವರಂತೆ. ಆದ್ರೆ ಗೀತಾ ಮಾತ್ರಾ ಅದನ್ನ ಕೇಳಿಸ್ಕೊಳ್ಳದೇ "ಇನ್ನೂ ಕೇಳ್ರಿ, ಅವ್ರ ದೊಡ್ಡಪ್ಪ, ಚಿಕ್ಕಪ್ಪಂಗೆ ಕುರ್ತಾ ಪ್ಯಾಲೇಸಿಂದ ಸ್ಪೆಷಲ್ ಕುರ್ತಾ ತರಬೇಕಂತೆ. ಅವರ ಅಪ್ಪಂಗೂ ಅಂಥದ್ದೇ ತಂದ್ರೂ ಪರವಾಗಿಲ್ಲ ಅಂದ್ರು. "ಮತ್ತೆ ಅವರ ತಾಯಿಗೆ?" ಅಂತ ರಮ್ಯಾ ಮಧ್ಯಕ್ಕೆ ಬಾಯಿ ಹಾಕಿದ್ರು. "ಅಯ್ಯೋ ಮತ್ತೆ ಅವ್ರನ್ನ ಹ್ಯಾಗ್ರೀ ಬಿಡೋದು, ನೋಡಿ ಗೀತಾ, ಅಕ್ಕ ಕಾಂಜೀವರಮ್ ಬಿಟ್ರೆ ಬೇರೆ ಯಾವುದೇ ಸೀರೆನಾ ಉಡೋದಿಲ್ಲ.. ಅವ್ರಿಗೆ ನಲ್ಲಿಯಲ್ಲೇ ತೊಗೊಂಡು ಬಿಡಿ ಅಂದ್ರು. "ಮುಂದೆ?" ಅದಕ್ಕೆ ನಗುತ್ತ "ಇವ್ರ ಮಾತನ್ನ ಕೇಳ್ತಾ ಕೂತಿದ್ದ ನನ್ನ ಮಗಳು ಹೊರಗೆ ಬಂದವಳೇ. "ಅಮ್ಮಾ, ಗೌತಮ್ ಫೋನ್ ಮಾಡಿದ್ರು.ಅತ್ತೆ ಮತ್ತು ಚಿಕ್ಕಮ್ಮ ನನಗೆ ಒಂದು ಗೋಲ್ಡ್ ಸೆಟ್ ಹಾಕಬೇಕೂಂತಿದ್ದಾರಂತೆ. ಆದ್ರೆ ಅವ್ರಿಗೆ ಎಂಥದ್ದು ಅಂತ ತಿಳೀತಾಇಲ್ಲವಂತೆ. ನಿನಗೆ ಗೊತ್ತಲ್ಲಮ್ಮಾ ನನಗೆ ಡೈಮಂಡ್ ಅಂದ್ರೆ ತುಂಬಾ ಇಷ್ಟ ಅಂತ. ಅದಕ್ಕೆ ಒಂದು ಕೆಲ್ಸಾ ಮಾಡೋಣಾ, ಚಿಕ್ಕಮ್ಮಾ, ಹೇಗೂ ನೀವು ಬಂದಿದ್ದೀರಾ ಬನ್ನಿ ಮತ್ತೆ. ಇಲ್ಲೇ ಸಮೀಪದಲ್ಲೇ ನಕ್ಷತ್ರ ಡೈಮಂಡ್ ಶೋರೂಮು ಇದೆ. ನಾನೇ ಸೆಲೆಕ್ಟ್ ಮಾಡಿಬಿಡ್ತೀನಿ" ಅಂದ್ಲು! ಹಹಹ.. ಇಷ್ಟು ಕೇಳಿದ್ದೇ ಸಾಕು. ಇಬ್ಬರ ಮುಖ ಇಳಿದೇ ಹೋಯ್ತು. ಓ, ಸರಿಸರಿ ಅಕ್ಕನ ಜೊತೆಗೆ ಬರ್ತೀವಿ ಅಂತ ಓಡೇ ಹೋದ್ರು." " ಹಹಹ. ಭಾರೀ ಜಾಣೆ ನಿಮ್ಮ ಗೌರಿ ಮುಂದೆ?" ಅಂದ್ರು ರಮ್ಯಾ. "ಮುಂದೆ? ಅಲ್ಲಿ ನೋಡಿ ಗೌರಿ, ಗೌತಮ್ ಬರ್ತಾ ಇದ್ದಾರೆ" ಅಂತ ಹೆಮ್ಮೆಯಿಂದ ತನ್ನ ಮಗಳು ಭಾವಿ ಅಳಿಯನತ್ತ ನೋಡುತ್ತಾ ನಿಂತಾಗ ನಾನೂ ತಿಳವಳಿಕೆಯ ಹೊಸ ಪೀಳಿಗೆಗೆ ಶಹಬ್ಬಾಸ್ ಅಂತ ಮನದಲ್ಲೇ ಅಂದೆ. ಅ

**ಸವಿತಾ ಇನಾಮದಾರ್**

## ಅಗ್ನಿಯ ರೆಕ್ಕೆಗಳು




ಭಾರತದ ಮಾಜಿ ರಾಷ್ಟ್ರಪತಿ ಡಾ. ಅಬ್ದುಲ್ ಕಲಾಂ ಅವರ ಆತ್ಮ ಚರಿತ್ರೆ ವಿಂಗ್ಸ್ ಆಫ್ ಫಯರ್ ಅನ್ನು ಕನ್ನಡದಲ್ಲಿ ಅಗ್ನಿಯ ರೆಕ್ಕೆಗಳು ಎಂದು ಭಾಷಾಂತರಿಸಿದ ಕೆ. ಜಯಪ್ರಕಾಶ್ ರಾವ್ ಅವರ ಪುಸ್ತಕವು ಬೆಳಗಾವಿಯ ಕೆ.ಎಲ್.ಇ. ಸೊಸೈಟಿಯ ಲಿಂಗರಾಜ್ ಕಾಲೇಜಿನ ಬಿ.ಎ. ಪದವಿ ತರಗತಿಗೆ ಪಠ್ಯಪುಸ್ತಕವಾಗಿ ಆಯ್ಕೆಯಾಗಿದೆ. ದೆಹಲಿ ಕರ್ನಾಟಕ ಸಂಘದ ಅಜೀವ ಸದಸ್ಯರಾಗಿರುವ ಜಯಪ್ರಕಾಶ್ ರಾವ್ ಅವರ ಈ ಪುಸ್ತಕವು 2003ರಲ್ಲಿ ಪ್ರಕಟಗೊಂಡು 12 ಬಾರಿ ಮರುಮುದ್ರಣ ಕಂಡು ಕನ್ನಡದಲ್ಲಿ ಬಹಳಷ್ಟು ಜನಪ್ರಿಯವಾಗಿದೆ. ಅ

## ಶ್ರೀ ವಿ.ಆರ್. ಗುಡ್ಡೇಗೌಡ ಅವರಿಗೆ ಡಾಕ್ಟರೇಟ್ ಪದವಿ




ಭಾರತ ಸರ್ಕಾರದ ವಾಣಿಜ್ಯ ಮಂತ್ರಾಲಯದ ಕಾಫಿ ಮಂಡಳಿಯಲ್ಲಿ ವಿಶೇಷ ಅಧಿಕಾರಿಯಾಗಿ ಸೇವೆ ಸಲ್ಲಿಸುತ್ತಿರುವ ಶ್ರೀಯುವ ವಳಗೆರೆಹಳ್ಳಿ ರಂಗೇಗೌಡ ಗುಡ್ಡೇಗೌಡ ಅವರಿಗೆ ದೆಹಲಿಯ ಜಾಮಿಯ ಮಿಲಿಯ ಇಸ್ಲಾಮಿಯ ವಿಶ್ವವಿದ್ಯಾಲಯವು ಗೌಡರು ಮಂಡಿಸಿದ "ಅಂಡರ್‌ಸ್ಟ್ಯಾಂಡಿಂಗ್ ದ ಡಿಸಿಷನ್ ಮೇಕಿಂಗ್ ಬಿಹೇವಿಯರ್ ಇನ್ ಕಾಫಿ ಫಾರ್ಮರ್ಸ್ ಆಫ್ ಸೌತ್ ಇಂಡಿಯಾ" ಎಂಬ ಪ್ರೌಢ ಪ್ರಬಂಧಕ್ಕೆ ಪಿ.ಎಚ್.ಡಿ. ಪದವಿಯನ್ನು ನೀಡಿದೆ.

ಶ್ರೀಯುತ ಗೌಡರು ಕಳೆದ 8 ವರ್ಷಗಳಿಂದ ಸಂಪರ್ಕ ಅಧಿಕಾರಿಯಾಗಿದ್ದು ಕಾಫಿ ಬೆಳೆಗಾರರ ಬಗ್ಗೆ ಅತೀವ ಕಾಳಜಿ ಹೊಂದಿದವರು. 2000 ದಿಂದ 2004ರವರೆಗೆ ಕಾಫಿ ಬೆಳೆಗಾರರು ಅನುಭವಿಸಿದ ಸಂಕಷ್ಟವನ್ನು ಗಮನದಲ್ಲಿರಿಸಿಕೊಂಡು ಇಂತಹ ಪರಿಸ್ಥಿತಿಯಲ್ಲಿ ಅವರು ಅನುಸರಿಸಿದ ಮಾರ್ಗೋಪಾಯಗಳ ಬಗ್ಗೆ ಸಂಶೋಧನೆ ನಡೆಸಿದ್ದಾರೆ. ಮೂಲತಃ ಬಡ ರೈತಾಪಿ ಕುಟುಂಬದಿಂದ ಬಂದ ಅವರು ರೈತರ ಆತ್ಮಹತ್ಯೆ ಮುಂತಾಗಿ ಅವರು ಅನುಭವಿಸಿದ ಕಷ್ಟ ಕಾರ್ಪಣ್ಯಗಳ ಬಗ್ಗೆ ಕಾಳಜಿ ಹೊಂದಿರುವ ಅವರು ತಮ್ಮ 30 ವರ್ಷಗಳ ಕಾಫೀ ಮಂಡಳಿಯ ಸೇವೆಯ ಅನುಭವವನ್ನು ಈ ಸಂಶೋಧನೆ ನಡೆಸಲು ಬಳಸಿಕೊಂಡಿದ್ದಾರೆ.

ಶ್ರೀಯುತರು ಹಾಸನ ಜಿಲ್ಲೆಯವರಾಗಿದ್ದು ಪ್ರಾಥಮಿಕ ಶಿಕ್ಷಣವನ್ನು ಹಾಸನದ ಸಂತ ಜೋಸೆಫ್ ಶಾಲೆ ಮತ್ತು ಸರ್ಕಾರಿ ಕಾಲೇಜಿನಲ್ಲಿ ಮಾಡಿ ತಮ್ಮ ಕೃಷಿ ಪದವಿಯನ್ನು 1982ರಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಿಂದ ಪಡೆದರು. ಓದಿನಲ್ಲಿ ಅತೀವ ಆಸಕ್ತಿ ಇದ್ದುದರಿಂದ ವೃತ್ತಿಯ ಜೊತೆಜೊತೆಗೆ ರಾತ್ರಿ ಕಾಲೇಜಿನಲ್ಲಿ ಕಾನೂನು ಪದವಿ ಮತ್ತು ಕೆಎಸ್‌ಓಯು ದೂರ ಶಿಕ್ಷಣದಲ್ಲಿ ಎಂ.ಬಿ.ಎ. ಪದವಿಗಳನ್ನು ಪಡೆದಿದ್ದಾರೆ. ಡಾಕ್ಟರೇಟ್ ಪದವಿ ಪಡೆದಿರುವ ಶ್ರೀ ವಿ.ಆರ್. ಗುಡ್ಡೇಗೌಡರಿಗೆ ದೆಹಲಿ ಒಕ್ಕಲಿಗ ಗೌಡ ಸಂಘವು ಸನ್ಮಾಸಿದೆ. ಅ

*ಪಿ.ಸಿ. ಶ್ರೀನಿವಾಸ*

## ಡಾ. ಸಿ.ಎನ್. ರಾಮಚಂದ್ರನ್ ಅವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ



ಕನ್ನಡದ ಖ್ಯಾತ ಸಾಹಿತಿ, ವಿಮರ್ಶಕ ಡಾ. ಸಿ.ಎನ್. ರಾಮಚಂದ್ರನ್ ಅವರ 'ಆಖ್ಯಾನ-ವ್ಯಾಖ್ಯಾನ' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಘೋಷಣೆಯಾಗಿದೆ.

ಮಂಗಳೂರು ವಿಶ್ವವಿದ್ಯಾಲಯದ ಇಂಗ್ಲಿಷ್ ವಿಭಾಗದ ಮುಖ್ಯಸ್ಥರಾಗಿ 1996ರಲ್ಲಿ ನಿವೃತ್ತರಾದ ಡಾ. ಸಿ.ಎನ್. ರಾಮಚಂದ್ರನ್ ಅವರು ದೇಶದ ಮತ್ತು ವಿದೇಶದ ಹಲವು ಪ್ರತಿಷ್ಠಿತ ವಿಶ್ವವಿದ್ಯಾಲಯಗಳಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದವರು. ಕನ್ನಡದಲ್ಲಿ ಹಾಗೂ ಇಂಗ್ಲಿಷ್‌ನಲ್ಲಿ ಹಲವಾರು ಕೃತಿಗಳನ್ನು ರಚಿಸಿದ ಡಾ. ಸಿಎನ್ನಾರ್ ಅವರು ಕನ್ನಡದ ಪ್ರಮುಖ ವಿಮರ್ಶಕರಲ್ಲೊಬ್ಬರು.

ವಸಾಹತ್ತೋತ್ತರ ಚಿಂತನೆ, ತೌಲನಿಕ ಸಾಹಿತ್ಯ, ಹೊಸ ಮಡಿಯ ಮೇಲೆ ಚದುರಂಗ, ಶೋಧ (ಕಾದಂಬರಿ), ಕಸಾಂದ್ರ (ಕಥಾ ಸಂಕಲನ) ವನ್ನು ರಚಿಸಿರುವ ಅವರ ಆತ್ಮಕಥನ ನೆರಳುಗಳ ಬೆನ್ನುಹತ್ತಿ ಇತ್ತೀಚೆಗೆ ಪ್ರಕಟಗೊಂಡಿತ್ತು. ಮಲೆ ಮಾದೇಶ್ವರ ಮೌಖಿಕ ಕಥನ, ವೀರಪ್ಪಮೊಯಿಲಿ ಅವರ ತೆಂಬರೆ, ಚಂದ್ರಶೇಖರ ಕಂಬಾರರ ಶಿವರಾತ್ರಿ ಸೇರಿದಂತೆ ಹಲವು ಕೃತಿಗಳನ್ನು ಕನ್ನಡದಿಂದ ಇಂಗ್ಲಿಷ್‌ಗೆ ಅನುವಾದಿಸಿದ್ದಾರೆ. ಅ



## ಗ್ರಂಥಾಲಯದಲ್ಲಿ ಹೊಸ ಪುಸ್ತಕಗಳ ಸೇರ್ಪಡೆ

ದೆಹಲಿ ಕರ್ನಾಟಕ ಸಂಘದ ಗ್ರಂಥಾಲಯಕ್ಕೆ ಇತ್ತೀಚೆಗೆ ಹೊಸ ಕೃತಿಗಳನ್ನು ಸೇರಿಸಲಾಗಿದೆ. ಅವುಗಳಲ್ಲಿ ಕೆಲವು:

ಮನೋಹರ ಗ್ರಂಥಮಾಲಾ, ಧಾರವಾಡದ ಪ್ರಕಟಣೆಗಳಾದ ಆತ್ಮ ವೃತ್ತಾಂತ (ರಜನಿ ನರಹಳ್ಳಿ), ಹೊಸ ಚಕ್ಕಡಿ ಕತೆಗಳು (ಡಾ. ಬಸು ಬೇವಿನಗಿಡದ), ಚಿತ್ರಲಾಟ ((ನಾಟಕ –ಪ್ರಕಾಶ್ ಗರುತ), ಯು.ಆರ್. ಅನಂತಮೂರ್ತಿ ವೈಚಾರಿಕತೆ ಹಾಗು ಸಾಹಿತ್ಯ (ಜಿ.ಎಸ್. ಅಮೂರ), ಕರ್ನಲ್‌ನಿಗೆ ಯಾರು ಬರೆಯುವುದೇ ಇಲ್ಲ (ಶ್ರೀನಿವಾಸ ವೈದ್ಯ).

ತ್ರಿಮೂರ್ತಿ ಪ್ರಕಾಶನ, ಬೆಂಗಳೂರಿನ ಪ್ರಕಟಣೆಗಳಾದ ಕೆ.ಎನ್. ಕುಮಾರ್ ಅವರ ಆಧುನಿಕ ಶ್ರೀ ಸತ್ಯ ನಾರಾಯಣ ಕಥಾ, ಆಧುನಿಕ ಶ್ರೀಶ್ರೀ ಶಿವಮಹಾಪುರಾಣ ಮತ್ತು ಆಧುನಿಕ ಶ್ರೀಮತ್ ಭಗವತ್‌ಗೀತಾ. ರಾವತ್ ಪಬ್ಲಿಕೇಶನ್ಸ್, ನವದೆಹಲಿಯ ಪ್ರಕಟಣೆಯಾದ ಸಖಾರಾಮ ಸೋಮಯಾಜಿ ಮತ್ತು ಸುಮಿತಾ ದಾಸ್‌ಗುಪ್ತಾ ಅವರ ಸೋಶಿಯಾಲಜಿ ಆಫ್ ಡಿಸ್‌ಪ್ಲೇಸ್‌ಮೆಂಟ್-ಪಾಲಿಸಿ ಎಂಡ್ ಪ್ರಾಕ್ಟಿಸ್. ಅ



# ಡಾ. ಜಿ. ಎಸ್. ಶಿವರುದ್ರಪ್ಪ ಶ್ರದ್ಧಾಂಜಲಿ

# ನಾಡಿನ ವಿವೇಕದ ಸಂಕೇತ

ಡಾ. ಜಿ. ಎಸ್. ಶಿವರುದ್ರಪ್ಪನವರು 20ನೇ ಶತಮಾನದ ಪ್ರಮುಖ ಸಾಹಿತ್ಯಿಕ ಚಳುವಳಿಗಳಾದ ನವೋದಯ, ಪ್ರಗತಿಶೀಲ, ನವ್ಯ ಮತ್ತು ಬಂಡಾಯಗಳ ಅತ್ಯುತ್ತಮ ಅಂಶಗಳನ್ನೆಲ್ಲ ಮೈಗೂಡಿಸಿಕೊಂಡು ಬರೆದ ಮಹತ್ವದ ಲೇಖಕ. ಅವರ ಗದ್ಯ ಮತ್ತು ಪದ್ಯಗಳಲ್ಲಿ ನವೋದಯದ ಭಾವುಕತೆ, ಪ್ರಗತಿಶೀಲ ಚಳುವಳಿಯ ಸಾಮಾಜಿಕ ಕಳಕಳಿ, ನವ್ಯದ ಆಕೃತಿ ಸೂಕ್ಷ್ಮತೆ ಮತ್ತು ಬಂಡಾಯದ ಪ್ರಗತಿಪರ ಚಿಂತನೆಗಳು ತಾನೇ ತಾನಾಗಿ ಮೇಳವಿಸಿತ್ತು. ಹಾಗೆ ನೋಡಿದರೆ ಅವರ ಗದ್ಯ ಮತ್ತು ಪದ್ಯಗಳ ನಡುವೆ ಅಂಥ ಅಂತರವೇನೂ ಇರಲಿಲ್ಲ. ಎಲ್ಲ ವಯಸ್ಸಿನ ಓದುಗರನ್ನು ಏಕಕಾಲಕ್ಕೆ ಮುಟ್ಟಬಲ್ಲ ಶಕ್ತಿ ಅವರ ಭಾಷೆಗಿತ್ತು. ಜಿ ಎಸ್ ಎಸ್ ಒಳ್ಳೆಯ ಆಡಳಿತಗಾರನಾಗಿಯೂ ಹೆಸರು ಪಡೆದವರು. ಅವರು ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗವನ್ನು ಕಟ್ಟಿದ ರೀತಿ ಇದಕ್ಕೆ ಅತ್ಯುತ್ತಮ ಉದಾಹರಣೆ. ನಾಡಿನ ಪ್ರತಿಭಾವಂತರನ್ನೆಲ್ಲ ಒಂದೆಡೆ ಸೇರಿಸಿದ ಹಿರಿಮೆ ಅವರದು. ಅವರ ನೇತೃತ್ವದಲ್ಲಿ ನಡೆದ ವಿಚಾರ ಸಂಕಿರಣಗಳು ನಾಡಿನ ಚಿಂತನಾಕ್ರಮವನ್ನೇ ಬದಲಾಯಿಸಿದುವು.

ಕುವೆಂಪು ಅವರ ವಿಚಾರ ಧಾರೆಗಳಿಂದ ಪ್ರಭಾವಿತರಾಗಿದ್ದ ಅವರು, ತಮ್ಮ ಜೀವಿತಾವಧಿಯುದ್ದಕ್ಕೂ, ಕೋಮುವಾದ, ಜಾತಿವಾದ, ದಲಿತ ಮತ್ತು ಮಹಿಳೆಯರ ಮೇಲಿನ ಅನ್ಯಾಯಗಳನ್ನು ಪ್ರತಿಭಟಿಸುತ್ತಲೇ ಬಂದರು. ಯಾರ ಹಂಗಿಗೂ ಒಳಗಾಗದೆ, ತಮ್ಮ ಅಭಿಪ್ರಾಯಗಳನ್ನು ತಮ್ಮದೇ ಮೃದು ಭಾಷೆಯಲ್ಲಿ ಪ್ರಕಟಪಡಿಸುತ್ತಿದ್ದ ಅವರು ನಾಡಿನ ವಿವೇಕ ಸದಾ ಜಾಗೃತರಾಗಿರುವಂತೆ ನೋಡಿಕೊಳ್ಳುತ್ತಿದ್ದರು.

20 ನೇ ಶತಮಾನದ ಪ್ರಮುಖ ವೈಚಾರಿಕರೂ, ಲೇಖಕರೂ ಆಗಿದ್ದ ಅವರಿಂದ ನಾನು ಮತ್ತು ನನ್ನ ತಲೆಮಾರು ವಿಶೇಷವಾದ ಪ್ರಭಾವಕ್ಕೆ ಒಳಗಾಗಿದ್ದೇವೆ.

*ಡಾ. ಪುರುಷೋತ್ತಮ ಬಿಳಿಮಲೆ*

# ಪಂಥಾತೀತ, ವಿಶಿಷ್ಟ ಪ್ರಬುದ್ಧತೆಯ ಚಿಂತಕ

ಹಿರಿಯ ಕವಿ, ವಿದ್ವಾಂಸ, ವಿಮರ್ಶಕ, ಚಿಂತಕ ಮತ್ತು ಪ್ರಾಧ್ಯಾಪಕ ಜಿ.ಎಸ್. ಶಿವರುದ್ರಪ್ಪನವರ ನಿಧನ ಕನ್ನಡ ಸಾರಸ್ವತ ಲೋಕಕ್ಕೆ ಬಹಳ ದೊಡ್ಡ ನಷ್ಟವನ್ನುಂಟುಮಾಡಿದೆ.

ಕವಿಯಾಗಿ ಜಿ.ಎಸ್. ಶಿವರುದ್ರಪ್ಪನವರು ತಮ್ಮ ಆರಂಭಕಾಲದಿಂದ ಇಂದಿನವರೆಗೆ ಕನ್ನಡ ಸಾಹಿತ್ಯದಲ್ಲಿ ನಡೆದ ಮೂರು ಮಹತ್ತರ ಪಲ್ಲಟಗಳನ್ನು ಅರಗಿಸಿಕೊಂಡು ತಮ್ಮದೇ ರೀತಿಯಲ್ಲಿ ವಿಶಿಷ್ಟ ಪ್ರಬುದ್ಧತೆಯನ್ನು ಸಾಧಿಸಿದರು. ಪಂಥಾತೀತರಾಗಿಯೂ ತಾವು ನಂಬಿದ ಮೌಲ್ಯಗಳ ಬಗ್ಗೆ ಸೂರ್ಯಸ್ಪಷ್ಟತೆಯನ್ನು ಜಾಗರೂಕವಾಗಿ ಕಾದುಕೊಂಡಿದ್ದರು. ಎಲ್ಲವನ್ನೂ ತೆರೆದಮನದಿಂದ ತೆಗೆದುಕೊಂಡು ಯಾವುದಕ್ಕೂ ಅಧೀನವಾಗದ ಅವರ ಸಮನ್ವಯ ದೃಷ್ಟಿ ಗೌರವಾರ್ಹ.

ಸಾಹಿತ್ಯದ ಎಲ್ಲ ಪ್ರಕಾರಗಳನ್ನೂ ಶ್ರೀಮಂತಗೊಳಿಸಿದ ಜಿ.ಎಸ್.ಎಸ್ ಅವರು ತಾವು ವಿಪುಲ ಸಾಹಿತ್ಯವನ್ನು ಸೃಜಿಸಿದ್ದಲ್ಲದೆ ನಮ್ಮಂತಹ ಕಿರಿಯ ಬರಹಗಾರರನ್ನು ಸದಾ ಪೋಷಿಸುತ್ತಿದ್ದರು, ಪ್ರೋತ್ಸಾಹಿಸುತ್ತಿದ್ದರು. ಅತ್ಯಂತ ಪ್ರಭಾವಿ ಹಾಗೂ ಜನಪ್ರಿಯ ಪ್ರಾಧ್ಯಾಪಕರಾಗಿ ಸಹಸ್ರಾರು ವಿದ್ಯಾರ್ಥಿಗಳನ್ನು ರೂಪಿಸಿದ್ದಲ್ಲದೆ ಬರಹಗಾರರ ಸಮುದಾಯದಲ್ಲಿ ನೂರಾರು ಉದಯೋನ್ಮುಖರನ್ನು ತಾಯಿಗರುಳಿನಿಂದ ಪೊರೆಯುತ್ತಿದ್ದರು.

ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗವನ್ನು ಅವರು ಕಟ್ಟಿದ ರೀತಿ ಅನುಕರಣೀಯ. ಜಾತಿಕುಲಗಳ ಮುಲಾಜಿಗೆ ಬಲಿಯಾಗದೆ ಎಲ್ಲ ಜನಾಂಗದ ಪ್ರತಿಭಾವಂತರನ್ನು ನೇಮಕ ಮಾಡಿ ಕನ್ನಡ ಸಾಹಿತ್ಯದ ಬೋಧನೆ ಮತ್ತು ಸಂಶೋಧನೆಗಳಿಗೆ ಹೊಸ ದಿಕ್ಕು ಕಾಣುವಂತೆ ಮಾಡಿದರು. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿ ಆ ಸಂಸ್ಥೆಯ ಕಾರ್ಯಕ್ರಮಗಳನ್ನು ಅರ್ಥಪೂರ್ಣವಾಗಿ ವಿಸ್ತರಿಸಿದರು.

ನಿರಂತರ ಓದು, ಚಿಂತನೆ, ಬರವಣಿಗೆಗಳಲ್ಲಿ ತಮ್ಮನ್ನು ಕೊನೆಯವರೆಗೆ ತೊಡಗಿಸಿಕೊಂಡಿದ್ದ ಜಿ.ಎಸ್.ಎಸ್. ಅವರು ಸದಾ ಪ್ರಗತಿಪರರಾಗಿದ್ದು ಅಂಧಶ್ರದ್ಧೆ ಮತ್ತು ಕಂದಾಚಾರಗಳನ್ನು ನಿರ್ಭಯವಾಗಿ ವಿರೋಧಿಸುತ್ತಿದ್ದರು. ಕುರ್ಚಿಗಾಗಿ ಕಾತರಿಸದ, ಪದವಿಗಾಗಿ ಆತುರಪಡದ ಅವರು ಎಲ್ಲಾ ಒತ್ತಡಗಳಿಂದಲೂ ಮುಕ್ತರಾಗಿ ಆಲೋಚಿಸಬಲ್ಲವರಾಗಿದ್ದರು.

ಅವರ ಸಾವಿನಲ್ಲಿ ಕನ್ನಡ ಸಾಹಿತ್ಯ ಒಬ್ಬ ಹಿರಿಯ ಬರಹಗಾರ–ಚಿಂತಕರನ್ನು ಕಳೆದುಕೊಂಡಿದೆ. ಶಿಕ್ಷಣ ಕ್ಷೇತ್ರ ಒಬ್ಬ ಆದರ್ಶ ಅಧ್ಯಾಪಕರನ್ನು ಕಳೆದು ಕೊಂಡಿದೆ. ಸಮಾಜ ಒಬ್ಬ ದಿಟ್ಟ ಮಾರ್ಗದರ್ಶಿಯನ್ನು ಕಳೆದುಕೊಂಡಿದೆ.

ಸಮಸ್ತ ಕನ್ನಡ ಜನತೆ ಮಲ್ಲಿಗೆಯಂತೆ, ಶ್ರೀಗಂಧದಂತೆ ಮೇಲುನೋಟಕ್ಕ ಸರಳವೆನಿಸಿದರೂ ಅಪರೂಪವಾಗಿದ್ದ ಅಪೂರ್ವ ಹಿರಿಯರನ್ನು ಕಳೆದುಕೊಂಡಿದೆ

ಅವರಿಗೆ ನಮ್ಮೆಲ್ಲರ ಕೃತಜ್ಞತೆಯ ಕಂಬನಿ ಮತ್ತು ಎದೆತುಂಬಿ ಬಂಡ ನಮಸ್ಕಾರ.

*–ಎಚ್.ಎಸ್. ಶಿವಪ್ರಕಾಶ್*

# ಸಂಘದೊಂದಿಗೆ ಉತ್ತಮ ಬಾಂಧವ್ಯ

ಕನ್ನಡದ ಹೆಸರಾಂತ ಕವಿ ಜಿ.ಎಸ್.ಶಿವರುದ್ರಪ್ಪ ಇಂದು ನಮ್ಮನ್ನೆಲ್ಲ ಅಗಲಿರುವುದು ಕನ್ನಡಕ್ಕೆ ಹಾಗೂ ದೇಶದ ಸಾಹಿತ್ಯ ಕ್ಷೇತ್ರಕ್ಕೆ ತುಂಬಲಾರದ ನಷ್ಟವಾಗಿದೆ. ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದಲ್ಲಿ 1926ರಲ್ಲಿ ಜನಿಸಿದ ಅವರು ನವೋದಯ ಕವಿ ಎಂದೇ ಹೆಸರಾಗಿದ್ದರು. ಇವರು ಆಧುನಿಕ ಕನ್ನಡ ಸಾಹಿತ್ಯಕ್ಕೆ ನೀಡಿದ ಕೊಡುಗೆ ಅಪಾರವಾದುದು. ಸುವರ್ಣ ಕರ್ನಾಟಕ ವರ್ಷದ ಸಂದರ್ಭದಲ್ಲಿ ಇವರಿಗೆ ರಾಷ್ಟ್ರಕವಿ ಎಂಬ ಬಿರುದನ್ನು ನೀಡಲಾಗಿತ್ತು. ಇವರಿಗೆ ರಾಷ್ಟ್ರ ಮತ್ತು ರಾಜ್ಯಮಟ್ಟದ ಹಲವಾರು ಗೌರವಗಳು ಸಂದಿವೆ. ದೆಹಲಿ ಕರ್ನಾಟಕ ಸಂಘಕ್ಕೆ ಹಲವು ಬಾರಿ ಭೇಟಿ ನೀಡಿದ ಶಿವರುದ್ರಪ್ಪನವರು ಸಂಘದೊಂದಿಗೆ ಉತ್ತಮ ಬಾಂಧವ್ಯವನ್ನು ಹೊಂದಿದ್ದರು. ಇಂತಹ ಒಂದು ಮಹಾನ್ ವ್ಯಕ್ತಿಯನ್ನು ಕಳೆದುಕೊಂಡಿದ್ದು ಕರ್ನಾಟಕಕ್ಕೆ ಮಾತ್ರ ಅಲ್ಲದೇ ಇಡೀ ರಾಷ್ಟ್ರಕ್ಕೇ ತುಂಬಲಾರದ ನಷ್ಟವಾಗಿದೆ.

ದೆಹಲಿ ಕರ್ನಾಟಕ ಸಂಘದ ವತಿಯಿಂದ ಅಗಲಿದ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಪ್ರಾರ್ಥಿಸುತ್ತೇವೆ.

*– ವಸಂತ ಶೆಟ್ಟಿ ಬೆಳ್ಳಾರೆ*

## ಸಂಕ್ರಾಂತಿ

ಗತ ಸಂವತ್ಸರದ ಎಲ್ಲ ಸಂಕಟಗಳ ಮರೆತು
ಎಲ್ಲರೊಡನೆ ಕಲೆತು, ಬೆರೆತು, ಆಸೆಗಳ ಸರಮಾಲೆಯನು ಹೊತ್ತು
ಭರವಸೆಗಳ ಅಡಿಯಲಿ ಹೆಜ್ಜೆಯಿಟ್ಟು, ಕುಳಿತು, ನಿಂತು
ರಕ್ಷಿಸು ನನ್ನನು ಅನವರತ ಓ ದೇವ
ಎಂದು ಭಗವಂತನಲಿ ಮೊರೆಯಿಡುವ ಜೀವ

ಜಂಜಡಗಳ ಕಾವಿನಲಿ ಬಳಲಿ, ಬೆಂದು ನೊಂದ ಜೀವ
ಕಾದಿಹುದು ನವವರುಷಕೆ ಹರುಷದ ಹೊನಲು ಹರಿಯುವುದೆಂದು
ಯಾರಿಗೆ ಗೊತ್ತು ಎಲ್ಲಿ ಅಡಗಿಹುದು ಯಾವುದು
ದುಃಖ ದುಮ್ಮಾನವೋ ಸುಖ ಸಂತೋಷವೋ ತಿಳಿಯುದೆಂತು

ಎಂತಾದರೇನು ಎನಿತಾದರೇನು
ಭವಸಾಗರದಲಿ ತೇಲುತಾ, ಮುಳುಗುತಾ, ಸಾಗುತಾ
ಇನಿತು ದಿನ ಜೀವನ ಸಾಗಿಸಲಿಲ್ಲವೇನು?
ಇಂದೇಕೆ ಅಂಜಿಕೆ ಶಂಕೆ ಮುಂದೇನೆಂದು
ಆಗುವುದೇನೆಂದು ಕೊರಗಬೇಡ ಚಿಂತಿಸುತ
ಇಹದಲಿ ಈಜುತ ಪರದಲಿ ಸೇರುತ
ಜೊತೆಜೊತೆಗೆ ಎಳ್ಳು ಬೆಲ್ಲವ ಸವಿಯುತ
ಮುಂದೆ ಸಾಗುತಿರು ನೀ ಮನುಜ ಎಂದು ಹೇಳುತ

*– ನರೇಂದ್ರ ಎ.*

## ನೀನಲ್ಲವೇ?

ಹರುಷದಲಿ ಬಳಿ ಬಂದವನು
ಢಿಕ್ಕಿ ಕೊಟ್ಟು ಹೇಳಿದವನು
ಕ್ಷಮಿಸಿ... ತಪ್ಪಾಯಿತೆಂದು
ನಗುತಲೇ ಹೇಳಿದವನು ನೀನಲ್ಲವೇ?

ಪರವಾಗಿಲ್ಲ ಎಂದು ನಾನು
ಬಾಯಿ ಬಿಡುವ ಮೊದಲೆ
ನಿನ್ನ ಹತ್ತಿರ ಬರಲು
ಹೆಸರೇನು ಅಂದವನು ನೀನಲ್ಲವೇ?

ಹೆಸರ್ಹೇಳುತ ನಾನು
ತಲೆ ಬಾಗಿ ನಿಂತಾಗ
ಇನ್ನೂ ಹತ್ತಿರ ಬರಲು
ಕೈಸನ್ನೆ ಮಾಡಿದವನು ನೀನಲ್ಲವೇ?

ಮೊದಲ ಭೇಟಿಯಲೇ
ಪ್ರೇಮ ಬೀಜವು ಮೂಡಿ
ಆಗಾಗ ಸಂಧಿಸಿದಾಗ
ಐಸ್ಕ್ರೀಂ ತಿನಿಸಿದವನು ನೀನಲ್ಲವೇ?

ಗೆಳತಿಯ ಮನೆಯಲ್ಲಿ
ನಾವು ಸಂತಸದಲ್ಲಿದ್ದಾಗ
ಬಂದ ತಾಯಿಯ ನೋಡಿ
ಹೆದರಿ ಹಿಂಜರಿದವನು ನೀನಲ್ಲವೇ?

ಮದುವೆ ವೀಳ್ಯವ ಅರಿತು
ಹಿರಿಯರು ಬದಲಾಯಿಸು,
ನಿನ್ನ ಕೆಣಕಿ ನೋಡ್ದಾಗ
ಮೀಸೆಯ ತಿರಿಪ್ಪದವನು ನೀನಲ್ಲವೇ?

***ಡಾ. ಜಿ.ಡಿ. ಜೋಶಿ, ಮುಂಬಯಿ***





# ಕಿಂದರಿ ಜೋಗಿಯ ಮೋಡಿಗೆ ಮರುಳಾದ ಚಿಣ್ಣರು

ಸಣ್ಣೀಲಿ... ದೊಡ್ಡಲಿ...ಅವ್ವಾಲಿ... ಅಪ್ಪಿಲಿ...ಸುಂಡಿಲಿ...ಅಲ್ಲಿ–ಇಲ್ಲಿ... ಎಲ್ಲೆಂದರಲ್ಲಿ... ಕುಣಿದು ಕುಪ್ಪಳಿಸುವ ಇಲಿಗಳ ಹಾವಳಿಯೋ ಹಾವಳಿ... ಮಕ್ಕಳು ಮರಿ, ಗಂಡಸರು–ಹೆಂಗಸರು ಎಲ್ಲರಿಗೂ ಕಾಟವೋ ಕಾಟ...ಎಲ್ಲಿ ಅಂತೀರಾ... ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ... ಸಂದರ್ಭ : ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ವಾರ್ಷಿಕೋತ್ಸವದ ಅಂಗವಾಗಿ ದೆಹಲಿ ಕನ್ನಡ ಶಾಲೆಯ ಮಕ್ಕಳು ಪ್ರಸ್ತುತಪಡಿಸಿದ ಕುವೆಂಪು ವಿರಚಿತ 'ಬೊಮ್ಮನ ಹಳ್ಳಿಯ ಕಿಂದರ ಜೋಗಿ' ನಾಟಕದಲ್ಲಿ... ಡಿಸೆಂಬರ್ 15ರಂದು ದೆಹಲಿ ಕನ್ನಡ ಶಾಲೆಯ ಸುಮಾರು 40 ಮಕ್ಕಳು ಈ ನಾಟಕವನ್ನು ಪ್ರದರ್ಶಿಸಿದರು.

ಇಲಿಗಳ ದಾಂಧಲೆಯನ್ನು ತಡೆಯಲಾಗದೇ ಹಳ್ಳಿಯ ಗೌಡ ಕಿಂದರ ಜೋಗಿಯ ಮೊರೆ ಹೊಕ್ಕುತ್ತಾನೆ, ಬಣ್ಣ ಬಣ್ಣದ ವೇಷ ತೊಟ್ಟ ಕಿಂದರ ಜೋಗಿಯ ಕಿಂದರಿ ಗಾನದ ಮೋಡಿಗೆ ಮರುಳಾದ ಇಲಿಗಳೆಲ್ಲಾ ಅವನನ್ನು ಹಿಂಬಾಲಿಸುತ್ತಾ ನದಿಗೆ ಬೀಳುತ್ತವೆ. ಊರಿನವರೆಲ್ಲಾ ಇಲಿಗಳ ಕಾಟದಿಂದ ಮುಕ್ತಿ ಹೊಂದಿ ಸಂತಸಪಡುತ್ತಾರೆ. ಆದರೆ ಹಳ್ಳಿಯ ಗೌಡ ಕೊಟ್ಟ ಮಾತಿಗೆ ತಪ್ಪಿ ಕಿಂದರಜೋಗಿಗೆ ಬಹುಮಾನ ಕೊಡಲು ನಿರಾಕರಿಸಿದಾಗ ಸಿಟ್ಟಿಗೆದ್ದ ಜೋಗಿ ಮತ್ತೆ ಕಿಂದರಿ ಬಾರಿಸಿದಾಗ ಅದಕ್ಕೆ ಮನಸೋತ ಹಳ್ಳಿಯ ಮಕ್ಕಳೆಲ್ಲಾ ಅವನನ್ನು ಹಿಂಬಾಲಿಸಿ ಕಣ್ಮರೆಯಾಗುವುದೇ ಈ ರೂಪಕದ ತಿರುಳು. ಜನ ಜನಿತವಾದ ಈ ಕಥೆಯನ್ನು ಅರಿಯದವರಾರು?

1284ರಲ್ಲಿ ರಚಿತವಾದ ಹ್ಯಾಮ್ಲಿನ್ ಅವರ ಜನಪ್ರಿಯ ಜರ್ಮನ್ ಜಾನಪದ ಕಥಾವಸ್ತುವುಳ್ಳ 'ಪೈಡ್ ಪೈಪರ್' ನಾಟಕವು ಜಗತ್ತಿನ ಎಲ್ಲ ಭಾಷೆಗಳಿಗೂ ಭಾಷಾಂತರಗೊಂಡು ಶತ ಶತಮಾನಗಳಿಂದ ಜನಜನಿತವಾಗಿದೆ. ಕಾಲಘಟ್ಟಗಳಿಗೆ ತಕ್ಕಂತೆ ಬದಲಾಗುತ್ತ ಬಂದ ಈ ಕಥೆಯಿಂದ ಪ್ರೇರಿತರಾಗಿ 1926ರಲ್ಲಿ ರಾಷ್ಟ್ರಕವಿ ಕುವೆಂಪು ಅವರು ಕನ್ನಡ ನೆಲಕ್ಕೆ ಒಗ್ಗುವಂತೆ ಕನ್ನಡದ್ದೇ ಮೂಲವೆಂಬಂತೆ ರೂಪಾಂತರಿಸಿದ್ದಾರೆ. ಮೂಲ ಸಂಸ್ಕೃತಿಯ ಜೀವಸೆಲೆಯನ್ನು ಅರಳಿಸುವಲ್ಲಿ ತನ್ನದೇ ಆದ ವೈಶಿಷ್ಟತೆಯನ್ನು ಮೆರೆಯುವ ಈ ನಾಟಕವು ಈ ತನಕ ದೇಶದಾದ್ಯಂತ ಸಾವಿರಾರು ಪ್ರದರ್ಶನಗಳನ್ನು ಕಂಡು ಯಶಸ್ವಿಯಾಗಿದೆ.

ಕರ್ನಾಟಕದ ಪ್ರಸಿದ್ಧ ನಿರ್ದೇಶಕ, ರಂಗಕರ್ಮಿ ರಾಮಕೃಷ್ಣ ಬೆಳ್ತೂರು ಹಾಗೂ ರಾಜಪ್ಪ ಕೋಲಾರ, ಶ್ರೀನಿವಾಸ ತುರಂಡಹಳ್ಳಿ ಮತ್ತು ಬಿ.ಎ. ನಂಜುಂಡಪ್ಪ ಇವರ ತಂಡ ದೆಹಲಿಯಲ್ಲಿ 15ದಿನಗಳ ಕಾಲದ ತಂಗಿ ಕನ್ನಡ ಮಕ್ಕಳಿಗೆ ನಾಟಕ ತರಬೇತಿ ಶಿಬಿರವನ್ನು ನಡೆಸಿ ಆ ಮಕ್ಕಳಿಂದ ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ನೀಡಿದ ನಾಟಕ ಪ್ರದರ್ಶನ ವಾಸ್ತವದಲ್ಲಿ ಯಶಸ್ವಿ ನಾಟಕ ಪ್ರದರ್ಶನ. ದೆಹಲಿಯ ಕನ್ನಡದ ಮಕ್ಕಳಿಗೆ ರೋಮಾಂಚನದ ಅನುಭವವಾದರೆ, ಹೆತ್ತವರಿಗೆ ತಮ್ಮ ಮಕ್ಕಳ ಪ್ರತಿಭೆಯನ್ನು ನೋಡಿ ಆನಂದವೋ ಆನಂದ. ದೆಹಲಿಯ ಅನೇಕ ನಾಟಕ ಪ್ರೇಮಿಗಳು ಈ ನಾಟಕವನ್ನು ನೋಡಿ ಮೆಚ್ಚುಗೆ ವ್ಯಕ್ತಪಡಿಸಿದ್ದರಲ್ಲದೇ ಆಡಳಿತ ಸಮಿತಿಯ ಈ ಅಭೂತಪೂರ್ವ ಸಾಧನೆಗೆ ಮನ್ನಣೆ ಸೂಚಿಸಿದರು.

ಪರೀಕ್ಷೆಯಲ್ಲಿ ಗಳಿಸಿದ ಅಂಕಗಳಷ್ಟೇ ಸಾಧನೆಯ ಮೆಟ್ಟಲೆಂದು ಪರಿಗಣಿಸುವ ಈ ಕಾಲದಲ್ಲಿ, ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಮಕ್ಕಳನ್ನು ಪರಿಚಯಿಸುವ ಈ ವಿಶಿಷ್ಟ ಕಾರ್ಯಕ್ರಮದ ಉಸ್ತುವಾರಿಯನ್ನು ವಹಿಸಿದ್ದ ಆಡಳಿತ ಮಂಡಳಿಯ ಸದಸ್ಯರಾದ ಟಿ.ಎಂ. ಮೈಲಾರಪ್ಪನವರು ಅಧ್ಯಕ್ಷರ ವಿಶೇಷ ಶ್ಲಾಘನೆಗೆ ಪಾತ್ರರಾದರು, ಮಾತ್ರವಲ್ಲದೆ ತುಂಬಿದ ಸಭಾಂಗಣ ಹರ್ಷೋದ್ಗಾರಗಳಿಂದ ಈ ಪ್ರಯತ್ನಕ್ಕೆ ಪ್ರೋತ್ಸಾಹವನ್ನು ನೀಡಿತು.

ಕುವೆಂಪುರವರ ಬೊಮ್ಮನಹಳ್ಳಿಯ ಕಿಂದರಿಜೋಗಿ ನಾಟಕವನ್ನು ಈ ತನಕ 8 ಸಂಸ್ಥೆಗಳಲ್ಲಿ 8 ವಿವಿಧ ಬಗೆಯಲ್ಲಿ ನಿರ್ದೇಶಿಸಿದ್ದು ತಮಗೆ ದೆಹಲಿಯ ಅನುಭವ ವಿಶಿಷ್ಟವಾಗಿತ್ತು ಎಂದು ಹೇಳಿದ ನಿರ್ದೇಶಕ ಶ್ರೀ ರಾಮಕೃಷ್ಣ ಬೆಳ್ತೂರು ಅವರು ಹೆತ್ತವರಿಗೆ ತಮ್ಮ ಮಕ್ಕಳೊಂದಿಗೆ ಮಾತೃಭಾಷೆಯಲ್ಲಿಯೇ ಮಾತನಾಡಬೇಕೆಂದು ವಿನಂತಿಸಿಕೊಂಡರು.

40ಮಂದಿ ಮಕ್ಕಳನ್ನು ಒಗ್ಗೂಡಿಸಿ ಸತತ 15ದಿನಗಳ ತರಬೇತಿ ನೀಡುವ ನಿರ್ವಹಣೆಯನ್ನು ಹೊತ್ತವರು ಟಿ.ಎಂ. ಮೈಲಾರಪ್ಪ ಇವರಿಗೆ ನೆರವಾದವರು ಬೆಳಕು–ಶಿವಾನಂದ ಇಂಗಳೇಶ್ವರ, ಸಂಗೀತ–ರಾಜಪ್ಪ ಕೋಲಾರ, ಮೇಳ–ಶ್ರೀನಿವಾಸ ತೂರಾಂಡಳ್ಳಿ, ಬಿ.ಎ. ನಂಜುಂಡಪ್ಪ, ಟಿ.ಎಂ. ಮೈಲಾರಪ್ಪ, ರಂಗಸಜ್ಜಿಕೆ–ಸುಧೀರ್ ಫಡ್ನೀಸ್, ಶರೀಫ್ ಯು.ಎ., ವಸ್ತ್ರವಿನ್ಯಾಸ–ರೂಪಾ ರಾಮಕೃಷ್ಣ ಹಾಗೂ ಪ್ರಸಾದನ–ರಾಮಕೃಷ್ಣ ಬೆಳ್ತೂರು, ಇಂಪಾದ ಸಂಗೀತ, ಮಟಾಣಿ ಇಲಿಗಳು ಹಾಗೂ ಜೋಗಿಗಳ ಅತ್ಯಾಕರ್ಷಕ ಪ್ರಸಾದನ ಹಾಗೂ ವಸ್ತ್ರವಿನ್ಯಾಸ ಮತ್ತು ಮಕ್ಕಳ ಸಹಜಾಭಿನಯ ನಾಟಕಕ್ಕೆ ವಿಶೇಷ ಮೆರುಗು ತಂದಿತ್ತು.

ನಾಟಕ ಪೂರ್ತಿ ನಿಂತು ಕುತೂಹಲದಿಂದ ತನ್ಮಯಳಾಗಿ ನೋಡುತ್ತಿದ್ದ ಸಂತೋಷ್ ಕುಮಾರ್ ಉಪಾಧ್ಯಾಯ ಅವರ ಮಗಳು ಮಟಾಣಿ ಅನಘಳ "ಇಲಿಗಳು ಎಂತ ಮಾಡ್ತು ...ಎಲ್ಲಿ ಹೋತು ... ಕಿಂದರಿಜೋತಿ ಏನು ಮಾಡ್ದ...ಮಕ್ಕಳು ಎಲ್ಲಿ ಹೋತು" ಎಂಬೆಲ್ಲಾ ಉದ್ಗಾರಗಳು ನಾಟಕದ ಯಶಸ್ಸಿಗೆ ಸಾಕ್ಷಿಯಾಗಿದ್ದಂತೂ ನಿಜ... ಅ



# ದೆಹಲಿಯಲ್ಲಿ ಅಖಿಲ ಭಾರತ ಕನ್ನಡ ಸಮ್ಮೇಳನ



ಅಖಿಲ ಭಾರತ ಕನ್ನಡ ಸಂಸ್ಕೃತಿ ಸಮ್ಮೇಳನದ ದಶಮಾನೋತ್ಸವದ ಅಂಗವಾಗಿ ಶ್ರೀ ಗಣೇಶ ಮಿತ್ರ ಮಂಡಳಿ, ನವದೆಹಲಿ ಇವರ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಎರಡು ದಿನದ ಸಂಸ್ಕೃತಿ ಸಮ್ಮೇಳನವನ್ನು ಸಮ್ಮೇಳನದ ಅಧ್ಯಕ್ಷ ಶ್ರೀ ರೋಹಿತ್ ದಾಸ್ ನಾಯಕ್ ಅವರು ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಡಿಸೆಂಬರ್ 21ರಂದು ಉದ್ಘಾಟಿಸಿದರು. ಅವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಕನ್ನಡ ಸಾಹಿತ್ಯದ ಉಗಮ, ಬೆಳವಣಿಗೆಯ ವಿವರಗಳನ್ನು ಮಂಡಿಸಿದರು. ಕನ್ನಡ ನಾಡು, ನುಡಿ, ಸಂಸ್ಕೃತಿ ಹಾಗೂ ಪರಂಪರೆಯ ಹಿರಿಮೆ, ಸಾಧನೆಗಳನ್ನು ಬಣ್ಣಿಸಿದರಲ್ಲದೆ ಕನ್ನಡ ಭಾಷೆಯ ಉಳಿವಿನ ಅಗತ್ಯವನ್ನು ವಿಶ್ಲೇಷಿಸಿದರು.

ಈ ಸಂದರ್ಭದಲ್ಲಿ ಅಖಿಲ ಭಾರತ ಕನ್ನಡ ಸಮ್ಮೇಳನ ಸಮಿತಿಯ ಸಂಸ್ಥಾಪಕ ಶ್ರೀ ಕೆ.ಪಿ. ಮಂಜುನಾಥ್ ಸಾಗರ್, ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ, ಸಮ್ಮೇಳನದ ಗೌರವಾಧ್ಯಕ್ಷ ಶ್ರೀ ಅಲೆವೂರು ಶೇಖರ ಪೂಜಾರ್ ಮತ್ತು ಶ್ರೀ ಗಣೇಶ ಮಿತ್ರ ಮಂಡಳಿಯ ಅಧ್ಯಕ್ಷ ಶ್ರೀ ಯು.ಎ. ಶರೀಫ್ ಅವರು ಉಪಸ್ಥಿತರಿದ್ದರು.

ಬಾಲಮಿತ್ರ ಪ್ರತಿಷ್ಠಾನ ಸರಳೇಬೆಟ್ಟು, ಮಣಿಪಾಲ ಇವರಿಂದ ಚಕ್ರವ್ಯೂಹ ಪ್ರಹಸನ ಯಕ್ಷಗಾನದ ಪ್ರದರ್ಶನದೊಂದಿಗೆ ಆರಂಭವಾಯಿತು. ತರೀಕೆರೆಯ ಶ್ವೇತಾ ತಂಡದವರಿಂದ ವೀರಗಾಸೆ ಮತ್ತು ರೂಪಾ ಗಿರೀಶ್ ಅವರ ತಂಡದಿಂದ ಭರತನಾಟ್ಯ ನೃತ್ಯರೂಪಕವು ನಡೆಯಿತು. ನಂತರ ಕವಿಗೋಷ್ಠಿಯು ನಡೆಯಿತು. ಪ್ರಭಾರಾವ್ ನಿರ್ದೇಶನದ ನೃತ್ಯರೂಪಕ, ಶೃತ್ತಿಕಾ ದಯಾನಂದ ಅವರಿಂದ ನೃತ್ಯಪ್ರದರ್ಶನ, ಸ್ವಾಮಿಗ್ರೂಪ್ ಬೆಂಗಳೂರು ಇವರಿಂದ ಹಾಸ್ಯಸಂಜೆ, ದಾವಣಗೆರೆಯ ನೂಪುರ ಕಲಾ ಸಂಸ್ಥೆಯಿಂದ ಜಾನಪದ ನೃತ್ಯ ಪ್ರದರ್ಶನ ನಡೆಯಿತು. ಗೋ.ನಾ. ಸ್ವಾಮಿ ಅವರು ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

ಸಮಾರೋಪ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕೇಂದ್ರ ಸಚಿವರಾದ ಶ್ರೀ ಆಸ್ಕರ್ ಫರ್ನಾಂಡಿಸ್ ಅವರು ನಾಡು, ನುಡಿ, ಸಂಸ್ಕೃತಿಯ ಉಳಿವಿಗೆ ಸೇವೆ ಸಲ್ಲಿಸಲು ಸದಾಸಿದ್ಧ ಎಂದು ಹೇಳಿದರು. ಈ ಸಂದರ್ಭದಲ್ಲಿ ಸಾಮಾಜಿಕ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ, ಶ್ರೀ ಬಿ.ವಿ. ಬಂಗೇರ, ಶ್ರೀ ಡಿ.ಸಿ. ರಮೇಶ್, ಶ್ರೀ ಭಾಸ್ಕರ ಶೆಟ್ಟಿ ಸೊರಬ, ಶ್ರೀ ಎಂ. ಮಹದೇವ್ ಗುಲ್ಬರ್ಗಾ, ಶ್ರೀ ಸೆಲ್ವರಾಜ್ ಕೆ. ಬೆಂಗಳೂರು ಮತ್ತು ಮೈಸೂರಿನ ಶ್ರೀ ಪಿ. ರಾಜಪ್ಪ ವಿಶ್ವಕರ್ಮ ಇವರಿಗೆ ಹೃದಯವಂತರು ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಮಾದ್ಯಮಗೋಷ್ಠಿಯಲ್ಲಿ ಶ್ರೀ ಶ್ರೀನಿವಾಸ ಕಾರಿಯಪ್ಪ, ಶ್ರೀಮತಿ ರೇಣುಕಾ ನಿಡಗುಂದಿ, ಶ್ರೀ ಶಿವಣ್ಣ ಶೀತರ್ ಹಾಗೂ ಶ್ರೀ ಗಂಗಾಧರ ಕೊಪ್ಪರ್ ಅವರು ಸಮಕಾಲೀನ ಸಂದರ್ಭ ಹಾಗೂ ಮಾಧ್ಯಮಗಳ ಹೊಣೆಗಾರಿಕೆ ಬಗ್ಗೆ ವಿಚಾರ ಮಂಡನೆ ಮಾಡಿದರು.

ಸಮ್ಮೇಳನದ ಸಮಿತಿ ಸಂಸ್ಥಾಪಕರಾದ ಶ್ರೀ ಕೆ.ಪಿ. ಮಂಜುನಾಥ್ ಸಾಗರ್ ಅವರು ಮಾತನಾಡಿ ಮಾಧ್ಯಮಗಳು ಕನ್ನಡ ಸಾಂಸ್ಕೃತಿಕ ಕ್ಷೇತ್ರದ ವರದಿಗಳನ್ನು ಇತರ ಸುದ್ದಿಗಳಂತೆಯೇ ಪರಿಗಣಿಸಿ ತ್ವರಿತವಾಗಿ ಪ್ರಸಾರ ಮಾಡಬೇಕೆಂದು ಕರೆನೀಡಿದರು.

ಸಮಾರೋಪ ಸಮಾರಂಭದಲ್ಲಿ ಸಮ್ಮೇಳನದ ಅಧ್ಯಕ್ಷರಾದ ಶ್ರೀ ರೋಹಿತ್‌ದಾಸ್ ನಾಯಕ್, ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ, ದೆಹಲಿ ಕನ್ನಡ ವಿದ್ಯಾಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಸ್. ಕೃಷ್ಣ ಭಟ್, ಕನ್ನಡ ಜಾಗೃತಿ ವೇದಿಕೆಯ ಮಂಜುನಾಥ್ ದೇವ ಅವರು ಉಪಸ್ಥಿತರಿದ್ದರು.

ಸಮಿತಿಯ ಕಾರ್ಯದರ್ಶಿ ಶ್ರೀ ಯಕೂಬ್ ಖಾದರ್ ಗುಲ್ವಾಡಿ, ಸಂಘಟನಾ ಕಾರ್ಯದರ್ಶಿ ಶ್ರೀ ಶ್ರೀನಿವಾಸ ಕಾರಿಯಪ್ಪ ಸಮಾರೋಪ ಸಮಾರಂಭದಲ್ಲಿ ಹಾಜರಿದ್ದರು. ಅ

# ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿಯಿಂದ ಆನಂದಮಯ ಈ ಜಗಹೃದಯ ಸಂಗೀತ ಸಂಜೆ

ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿಯು ರಾಷ್ಟ್ರಕವಿ ಕುವೆಂಪು ಜನ್ಮದಿನದ ಅಂಗವಾಗಿ ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ 29 ಡಿಸೆಂಬರ್ 2013ರಂದು ಆನಂದಮಯ ಈ ಜಗಹೃದಯ ಎಂಬ ಕನ್ನಡ ಚಲನಚಿತ್ರ ಗೀತೆಗಳ ಸಂಗೀತ ಸಂಜೆ ಮತ್ತು ಸಮಾಜದಲ್ಲಿ ಗುರುತರ ಸೇವೆಯನ್ನು ಸಲ್ಲಿಸಿದ ಮಹನೀಯರನ್ನು ಅಭಿನಂದಿಸುವ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು.

ಸಮಾರಂಭದ ಅಧ್ಯಕ್ಷತೆಯನ್ನು ದೆಹಲಿ ಪೋಲಿಸ್ ಇಲಾಖೆಯಲ್ಲಿ ಡಿ.ಸಿ.ಪಿ.ಯಾಗಿ ಸೇವೆ ಸಲ್ಲಿಸುತ್ತಿರುವ ಶ್ರೀ ಬಿ.ಎಲ್. ಸುರೇಶ್ ಅವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ದೆಹಲಿ ಪೋಲಿಸ್ ಇಲಾಖೆಯ ಡಿ.ಸಿ.ಪಿ. ಶ್ರೀ ಹರೀಶ್ ಎಚ್, ನಾಡೋಜ ಡಾ. ಮಹೇಶ್ ಜೋಷಿ, ಹೆಚ್ಚುವರಿ ಮಹಾನಿರ್ದೇಶಕರು ದೂರದರ್ಶನ, ಜಾನಪದ ವಿದ್ವಾಂಸ ಹಾಗೂ ಅಮೆರಿಕನ್ ಇನ್ಸಿಟ್ಯೂಟ್ ಆಫ್ ಇಂಡಿಯನ್ ಸ್ಟಡೀಸ್‌ನ ನಿರ್ದೇಶಕರಾದ ಡಾ. ಪುರುಷೋತ್ತಮ ಬಿಳಿಮಲೆ ಹಾಗೂ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಮತ್ತು ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಭಾಗವಹಿಸಿದ್ದರು.

ಶ್ರೀ ಹರೀಶ್ ಬೆಂಗಳೂರು ಅರ್ಪಿಸಿದ ಸುಹಾಸ್ ಮೆಲೋಡಿಸ್ ತಂಡದವರಿಂದ ಸಂಗೀತ ಕಾರ್ಯಕ್ರಮ ಆನಂದಮಯ ಈ ಜಗಹೃದಯ ನೆರೆದಿದ್ದ ಸುಮಾರು 600 ರಿಂದ 700 ಜನ ದೆಹಲಿ ಕನ್ನಡಿಗರ ಮನಸೂರೆಗೊಂಡಿತು.

ಚಲನಚಿತ್ರ ನಿರ್ಮಾಪಕರು ಹಾಗೂ ನಿರ್ದೇಶಕಾರದ ಡಾ. ಎಚ್.ಎಂ. ಕೃಷ್ಣ ಮೂರ್ತಿ ಅವರ ಸೇವೆಯನ್ನು ಗುರುತಿಸಿ ಅಭಿನಂದಿಸಲಾಯಿತು.

ಇದೇ ಸಂದರ್ಭದಲ್ಲಿ ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿಯ ಸ್ಥಾಪಕರಾದ ಶ್ರೀಯುತ ಬಾಳಾಡಿ ಶ್ರೀನಿವಾಸ್ ಗೌಡ ಅವರನ್ನೂ ಸನ್ಮಾನಿಸಲಾಯಿತು.

ಪೋಲಿಸ್ ಇಲಾಖೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿರುವ ಶ್ರೀಯುತ ಕಲ್ಲಪ್ಪ ಭಜಂತ್ರಿ ಹಾಗೂ ಶ್ರೀ ಪರಯ್ಯ ಸ್ವಾಮಿ ಅವರನ್ನು ಗೌರವಿಸಲಾಯಿತು.

ಆರಂಭದಲ್ಲಿ ಕುವೆಂಪು ಅವರ ಬಗ್ಗೆ ಕಿರು ಪರಿಚಯವನ್ನು ನೀಡಲಾಯಿತು. ಶತಮಾನದ ಸಾಹಿತಿ ಕುವೆಂಪುರವರ ಜನ್ಮದಿನದ ಈ ಶುಭ ಸಂದರ್ಭದಲ್ಲಿ ಅವರದೇ ರಚಿತ "ಜಯಭಾರತ ಜನನಿಯ ತನುಜಾತೆ" ಕನ್ನಡ ನಾಡಗೀತೆಯನ್ನು ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿಯ ಶ್ರೀ ಎ.ಟಿ. ಶ್ರೀನಿವಾಸ್ ಮತ್ತು ತಂಡದವರು ಪ್ರಸ್ತುತಪಡಿಸಿದರು.

ಇತ್ತೀಚೆಗೆ ನಿಧನರಾದ ಯದುಕುಲದ ಕೊನೆಯ ಕೊಂಡಿ ಮೈಸೂರು ರಾಜವಂಶಸ್ಥ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಮತ್ತು ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪನವರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು.

ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿ ಅಧ್ಯಕ್ಷರಾದ ಶ್ರೀ ರಾಜ್‌ಕುಮಾರ್ ಅವರು ಸ್ವಾಗತಿಸಿದರು.

ಕಾರ್ಯಕ್ರಮದ ಕೊನೆಯಲ್ಲಿ ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿಯ ಕಾರ್ಯದರ್ಶಿಯಾದ ಶ್ರೀ ಗಿರೀಶ್ ಎಸ್ ಅವರು ವಂದಿಸಿದರೆ ಶ್ರೀಮತಿ ಪೃಥ್ವಿ ಕಾರಿಂಜೆ ಕಾರ್ಯಕ್ರಮ ನಿರೂಪಿಸಿದರು. ಅ







## ದೆಹಲಿ ಒಕ್ಕಲಿಗ ಗೌಡ ಸಂಘದ ವಾಯುವಿಹಾರ



ದೆಹಲಿ ಒಕ್ಕಲಿಗ ಗೌಡ ಸಂಘದ ಸದಸ್ಯರು ದೆಹಲಿಯ ನೆಹರೂ ಪಾರ್ಕ್‌ನಲ್ಲಿ ವಾಯುವಿಹಾರ ಕಾರ್ಯಕ್ರಮವನ್ನು ಡಿಸೆಂಬರ್ 25, 2013ರಂದು ಏರ್ಪಡಿಸಿದ್ದರು. ಆಟೋಟ ಸ್ಪರ್ಧೆಗಳೊಂದಿಗೆ ಆರಂಭವಾದ ಕಾರ್ಯಕ್ರಮದಲ್ಲಿ ಮಕ್ಕಳು ವಯಸ್ಕರಾದಿಯಾಗಿ ಎಲ್ಲರೂ ಭಾಗವಹಿಸಿದ್ದರು. ಸಂಘದ ಅಧ್ಯಕ್ಷರಾದ ಶ್ರೀ ಎನ್.ಎ. ಮಾಧವ ಅವರು ಸ್ವಾಗತಿಸಿದರು.

ಇದೇ ಸಂದರ್ಭದಲ್ಲಿ ಹೊಸದಾಗಿ ದೆಹಲಿಗೆ ವರ್ಗಾವಣೆಯಾಗಿ ಬಂದಿರುವ ವಿಶ್ವಬ್ಯಾಂಕಿನ ಹಿರಿಯ ಅಧಿಕಾರಿ ಶ್ರೀ ಕುಳ್ಳಪ್ಪ ಅವರನ್ನು ಹಾರ್ದಿಕವಾಗಿ ಸ್ವಾಗತಿಸಲಾಯಿತು. ಇತ್ತೀಚೆಗೆ 'ಪಿಎಚ್‌ಡಿ' ಪದವಿ ಪಡೆದ ದೆಹಲಿ ಒಕ್ಕಲಿಗ ಗೌಡ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ವಿ.ಆರ್. ಗುಡ್ಡೇಗೌಡವರನ್ನು ಈ ಸಂದರ್ಭದಲ್ಲಿ ಸನ್ಮಾನಿಸಲಾಯಿತು. ಆಟೋಟ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು ಮಧ್ಯಾಹ್ನದ ಭೋಜನಕ್ಕೆ ಬಾಡೂಟದ ವ್ಯವಸ್ಥೆ ಮಾಡಲಾಗಿತ್ತು. ಕಾರ್ಯಕ್ರಮದ ಕೊನೆಯಲ್ಲಿ ತಾಂಬೋಲ ಕಾರ್ಯಕ್ರಮ ಮನೋರಂಜನೆಯನ್ನು ತಂದುಕೊಟ್ಟಿತು. ಅ

*ಗಿರಿಜಾ ಶ್ರೀನಿವಾಸ*


## ಜನಕಪುರಿ ಕನ್ನಡ ಕೂಟದ ಆಟೋಟ ಸ್ಪರ್ಧೆ



ಜನಕಪುರಿ ಕನ್ನಡ ಕೂಟ ಡಿಸೆಂಬರ್ 15, 2013 ರಂದು ವಾರ್ಷಿಕ ಅಟೋಟಗಳ ಸ್ಪರ್ಧೆಯನ್ನು ಜನಕಪುರಿ ಡಿಸ್ಟ್ರಿಕ್ಟ್ ಪಾರ್ಕ್‌ನಲ್ಲಿ ಆಯೋಜಿಸಿತ್ತು. ಮುಂಜಾನೆಯಿಂದ ಆರಂಭವಾದ ವಿವಿಧ ಕ್ರೀಡಾ ಚಟುವಟಿಕೆಗಳಲ್ಲಿ ಕನ್ನಡ ಕೂಟದ ಸದಸ್ಯರು, ಅವರ ಮಕ್ಕಳೊಂದಿಗೆ ಕುಟುಂಬದ ಸದಸ್ಯರೂ ಪಾಲ್ಗೊಂಡಿದ್ದರು. ಮಕ್ಕಳಿಗೆ, ಮಹಿಳೆಯರಿಗೆ ಹಾಗೂ ಪುರುಷರಿಗಾಗಿ ಓಟದ ಸ್ಪರ್ಧೆ, ಲೆಮನ್ ಅಂಡ್ ಸ್ಪೂನ್ ಸ್ಪರ್ಧೆ, ವೇಗದ ನಡಿಗೆ ಇತ್ಯಾದಿಗಳನ್ನು ಹಮ್ಮಿಕೊಳ್ಳಲಾಗಿತ್ತು. ಮಧ್ಯಾಹ್ನದ ಭೋಜನಾನಂತರ ತಾಂಬೋಲ ಆಟವನ್ನು ಆಡಿಸಲಾಯಿತು. ಕೊನೆಯಲ್ಲಿ ಕ್ರೀಡಾ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದ ಎಲ್ಲರಿಗೂ ಜನಕಪುರಿ ಮಹಿಳಾ ಮಂಡಳಿ ಅಧ್ಯಕ್ಷರಾದ ಶ್ರೀಮತಿ ಸವಿತಾ ಇನಾಮದಾರ್ ಅವರು ವಂದನಾರ್ಪಣೆ ಮಾಡಿ ಆಟೋಟ ಕಾರ್‍ಯಕ್ರಮಕ್ಕೆ ಮುಕ್ತಾಯ ಹೇಳಿದರು. ಅ

*ಎನ್ ಪ್ರಕಾಶ್*

## ಮರೆಯಾದ ಜಿ.ಎಸ್. ಶಿವರುದ್ರಪ್ಪ



ಮನದಾಳದಲ್ಲಿ ನೆಲೆಯೂರಿ ಬೆಳೆದು
ಹೆಮ್ಮರವಾಗಿ ಎಲೆಯನ್ನು ಸಾವಿರಾರು
ಹಕ್ಕಿ ಪಕ್ಷಿಗಳು ಸವಿಯುತಿರೆ ಆನಂದವ
ಅಮೃತ ಕುಡಿದಂತಿತ್ತು.
ದುಂಬಿಗಳು ವಿವಿಧ ಹೂಗಳ ಮೇಲೆ
ಕುಳಿತು ಮಕರಂದವ ಹೀರುತ್ತಿರೆ ರಸ
ಭೋಜನ ಔತಣ ಸವಿದಂತಿತ್ತು.
ಹಸಿದು ಕುಳಿತಿರುವಾಗ ಮೃಷ್ಟಾನ್ನ
ಭೋಜನ ಸವಿದಂತಿತ್ತು.

ನಲ್ಲನ ಆಲಿಂಗನದಲಿ ರತಿ ಸುಖವ
ಅನುಭವಿಸಿದಂತಿತ್ತು.
ಬದುಕಿನ ಎಲ್ಲ ಸುಖವನು ಒಟ್ಟಿಗೆ
ಆನಂದಿಸಿದಂತಿತ್ತು.

ಕಾವ್ಯಾರ್ಥ ಚಿಂತನದಲಿ, ಮುಳುಗಿ ಸೌಂದರ್ಯ ಸಮೀಕ್ಷೆ
ಗ್ರಹಿಸಿ, ಕಾಣದ ಕಡಲಿಗೆ, ಎದೆ ತುಂಬಿ ಹಾಡಿದೆನು
ಹಾಡು ಹಳೆಯದಾದರೇನು ಹಾಡು ಕೇಳಿದಾಗ
ಪ್ರಪಂಚದ ಸುಖವನ್ನೇ ಗೆದ್ದಂಗಾತು ಕವಿಯ ಕವಿತೆಯಲಿ

ಮೂಢನಂಬಿಕೆ, ಕಂದಾಚಾರ ಆಷಾಡಭೂತಗಳ
ಜಾತಿ ಪದ್ಧತಿಯ ವಿರೋಧಿ ದನಿ ಜ್ವಲಂತಿಸಿತ್ತು.

ಸಾಹಿತ್ಯದಲಿ ಕವಿ ಕವಿತೆಗಳ ಪ್ರಿಯಕರಿಗೆ
ಬಂದೊದಗಿತ್ತು ಆಘಾತ, ಆ ಮಹಾಕವಿಯ
ರಾಷ್ಟ್ರಕವಿಯ ಮೆಲುಧನಿಯ ದನಿಕನ ಸಾವಿನ
ಸುದ್ದಿ. ಮುಂದೆಂದೂ ಕಾಣದ ಲೋಕಕೆ

ಕಳಚಿತೆಮ್ಮಯ ಕೊಂಡಿ ಕುವೆಂಪುವಿನ
ಅಂದಿನ ನಂಟು, ಅನಾಥವಾಗಿದೆ ಸಾರಸ್ವತಿಕ
ಲೋಕ ಕಂಬನಿ ಮಿಡಿದಿದೆ ಜಗದ ಜೀವಿ
ನೆನಪಿನಂಗಳದಲಿ ಅಮರನಾಗಿ
ಶಿವನ ಊರಿಗೆ ಸಾಗಿದ ರುದ್ರಪ್ಪ
ಜಿ.ಎಸ್. ಶಿವರುದ್ರಪ್ಪ ಅ

*ಎಂ.ಎಸ್. ಲಾವಣ್ಯ ಬಸವರಾಜ್*

## ಮನಗೆದ್ದ ಅಭಿಮತ


ಅಂದದ ಚಂದದ ಅಭಿಮತ
ಹೊಸ ವರ್ಷಕೆ ಸೊಬಗಿನ ಸ್ವಾಗತಾ

ಕನ್ನಡಿಗರ ಹೃದಯ ತುಂಬುತಾ
ಕರ್ನಾಟಕ ಸಂಘವ ಮೆರೆಸುತಾ
ದಿನ ದಿನಕೆ ಅಭಿಮಾನಿಗಳ ಹೆಚ್ಚಿಸುತಾ
ಓ ಎನ್ನ ಅಭಿಮತಾ... ಸ್ವಾಗತಾ...
ನಿನಗೆ ಸುಸ್ವಾಗತಾ...

ನೀ ಬರುತಿಹೇ ಸುದ್ದಿ ಸಂಗ್ರಹ ಹೊತ್ತು
ಕನ್ನಡ ಪ್ರಿಯರಿಗೆ ಅದುವೇ ಸಂಪತ್ತು
ನೀ ಸಾರುತಿಹೇ ಕನ್ನಡಿಗರ ಹಿರಿಮೆ
ಮನೆ ಮನಕೆ ತಲುಪುತಿದೆ
ಕರುನಾಡಿನ ಮಹಿಮೆ.

ಒಂದಾಗಿರಲಿ ಸಂಘದ ಒಕ್ಕೊರಲು
ಅದುವೇ ಅಭಿಮತಕೆ
ಸಂತಸದ ಹೊನಲು ಅ

*– ವರ್ಣಾ ಶಶಿಕುಮಾರ್, ಶಿವಮೊಗ್ಗ*




## ಕನ್ನಡ ಸಾಹಿತ್ಯ ಯಾತ್ರೆ ಅಪರೂಪದ ಪ್ರಯತ್ನ

ದೆಹಲಿ ಕರ್ನಾಟಕ ಸಂಘವು ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ನಡೆಸಿದ ವಿವಿಧ ಸಾಂಸ್ಕೃತಿಕ ಮತ್ತು ಸಾಹಿತ್ಯದ ಕಾರ್ಯಕ್ರಮಗಳಲ್ಲಿ ಒಂದಾದ ಕನ್ನಡ ಸಾಹಿತ್ಯ ಯಾತ್ರೆಯು ಒಂದು ಅಪರೂಪದ ಪ್ರಯತ್ನ. ರವಿ ಕಾಣದ್ದನ್ನು ಕವಿ ಕಂಡ ಎಂಬ ನುಡಿಯಂತೆ ಎಲ್ಲಾ ನೋಡುಗರನ್ನು ಕನ್ನಡ ಸಾಹಿತ್ಯ, ಕವನ, ಜಾನಪದ, ವಚನ ಮತ್ತು ನಾಟಕ ಸಾಹಿತ್ಯ ಬೆಳೆದು ಬಂದ ದಾರಿಯ ನೋಟ ಮತ್ತು ವಿವಿಧ ಕಾಲಘಟ್ಟದ ಸಾಹಿತ್ಯ ಮತ್ತು ಕರ್ನಾಟಕದ ಕಲೆಯ ಮತ್ತು ಕವಿ ದಿಗ್ಗಜರ ಪರಿಚಯ ಒಂದೇ ವೇದಿಕೆಯ ಮೇಲೆ ಎರಡೂವರೆ ಘಂಟೆಯಲ್ಲಿ ಹಂತ ಹಂತವಾಗಿ ವೈವಿಧ್ಯತೆಯ ಚಿತ್ರಣ ಮೂಡಿಸಿ ಪ್ರೇಕ್ಷಕರನ್ನು ಸಾಹಿತ್ಯದ ಲೋಕಕ್ಕೆ ಕರೆದೊಯ್ದಿತ್ತು. ಎಲ್ಲಾ ಕಲಾವಿದರು ವಿವಿಧ ಗೀತೆ, ನೃತ್ಯ, ನಾಟಕ ಹಾಗೂ ವಚನಗಳ ಮೂಲಕ ರಂಜಿಸಿದರಲ್ಲದೆ, ವಿವಿಧ ಕಾಲಘಟ್ಟದ ಸಾಹಿತ್ಯ ಪರಿಚಯ ಮತ್ತು ಕರ್ನಾಟಕದ ಕಲಾ ಶ್ರೀಮಂತಿಕೆಯ ಆಳವನ್ನು ಈಗಿನ ತಲೆಮಾರಿನ ಪ್ರೇಕ್ಷಕರಿಗೆ ತೋರಿಸಿದರು. ಶಿವಾನಂದ ಇಂಗಳೇಶ್ವರ ಮತ್ತು ಡಾ. ಬಿ.ವಿ. ಅಡ್ಕೋಳಿ ಅವರ ವಿನೂತನ ಶೈಲಿಯ ನಿರೂಪಣೆ ಕಾರ್ಯಕ್ರಮದುದ್ದಕ್ಕೂ ಮನೋರಂಜನೆಯ ಜೊತೆಗೆ ಕನ್ನಡ ಸಾಹಿತ್ಯ ಜ್ಞಾನವನ್ನು ನೋಡುಗರಿಗೆ ಉಣ ಬಡಿಸಿತ್ತು.

ಇಂತಹ ಒಂದು ಪ್ರಯೋಗ ಮತ್ತು ಪ್ರಯತ್ನ ಮತ್ತೆ ಮತ್ತೆ ಮರುಕಳಿಸಿದರೆ ಈಗ ಮೊಳಕೆಯೊಡೆದಿರುವ ಸ್ಥಳೀಯ ಕನ್ನಡ ಕಲಾಸಕ್ತಿ ಮುಂದೆ ಹೆಮ್ಮರವಾಗಿ ಕನ್ನಡದ ಜನತೆ ದೆಹಲಿ ಕನ್ನಡಿಗರೆಡೆ ತಿರುಗಿ ನೋಡುವಂತೆ ಮಾಡುವುದರಲ್ಲಿ ಸಂಶಯವಿಲ್ಲ. ಇದು ದೆಹಲಿಯಲ್ಲಿ ಹುಟ್ಟಿ ಬೆಳೆಯುತ್ತಿರುವ ಈಗಿನ ಪೀಳಿಗೆಯ ಮಕ್ಕಳಿಗೆ ಕನ್ನಡ ಸಾಹಿತ್ಯದೆಡೆಗೆ ಆಸಕ್ತಿ ಮೂಡಿಸುವ ಒಂದು ಪ್ರಯತ್ನ. ಅ

*ಹರಿಪ್ರಿಯ*


ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ ಸೌಜನ್ಯ ಪ್ರಿಂಟಿಂಗ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್ ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು. ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

**SAUJANYA**
**PRINTING PRESS**
A HOUSE OF QUALITY PRINTING

C-95, Okhla Industrial Area
Phase-I, New Delhi – 110 020

PHONE:
011-40520770

MOBILE:
9811104398,
9811604398

E-MAIL:
saujanyapp2010@gmail.com /
hpgp2006@gmail.com

# ಹೊಸತು

ಹೊಸತು. ಹಾಗೆ ನೋಡಿದರೆ ಪ್ರತಿಯೊಂದು ಕ್ಷಣವೂ ಹೊಸತು. ಹೊಸತು ಎಂಬುದು ಕುತೂಹಲ. ಅನಿರೀಕ್ಷಿತ. ಎಲ್ಲರೂ ತಮ್ಮ ಬದುಕಿನಲ್ಲಿ, ಚಿಂತನೆಯಲ್ಲಿ ಹೊಸತನಕ್ಕಾಗಿ ಹಾತೊರೆಯುತ್ತೇವೆ. ಕಳೆದ ಕ್ಷಣಗಳು ಉದುರಿದ ಎಲೆಯಂತೆ. ಆ ನಿನ್ನೆಗಳನ್ನು ಒಟ್ಟು ಮಾಡಿದಾಗ ಪರಂಪರೆಯ ಬೆಟ್ಟವಾಗುತ್ತದೆ.  ಮುಂದಿರುವ ನಾಳೆಗಳೂ ಕಾಣದ ಬೆಟ್ಟಗಳೇ ಆಗಿವೆ. ನಿನ್ನೆ ನಾಳೆಗಳ ನಡುವೆ ಇರುವ ಅತ್ಯಮೂಲ್ಯವಾದ ಈ ಕ್ಷಣವನ್ನು ಮರೆಯದೇ ಉಳಿಸಿಕೊಳ್ಳುವುದೇ ಬದುಕಾಗುತ್ತದೆ.

ಮಂಜೇಶ್ವರ ಗೋವಿಂದ ಪೈ, ಕುಪ್ಪಳ್ಳಿ ವೆಂಕಟ ಪುಟ್ಟಪ್ಪ, ಗುಗ್ಗರಿ ಶಾಂತವೀರಪ್ಪ ಶಿವರುದ್ರಪ್ಪನವರಿಗೆ ನಾಡು ಕನ್ನಡದ ರಾಷ್ಟ್ರಕವಿಗಳೆಂಬ ಗೌರವವನ್ನು ನೀಡಿದೆ. ಅವರೆಲ್ಲರ ಸೃಜನಾತ್ಮಕ ಸಾಹಿತ್ಯ ಕೃತಿಗಳಂತೆ ಅವರ ಬದುಕೂ ನಮಗೆ ಸ್ಫೂರ್ತಿದಾಯಕ. ನಮ್ಮ ಪರಂಪರೆಯ ಅತ್ಯಂತ ಅಮೂಲ್ಯವಾದ ಆಸ್ತಿಗಳಾದ ಈ ಅಮರ ವ್ಯಕ್ತಿತ್ವಗಳ ಕೃತಿಗಳ ನಿರಂತರ ಅಧ್ಯಯನದ ಜತೆಗೆ ಅವರ ಬದುಕಿನ ಮೌಲ್ಯಗಳೂ ನಮಗೆ ಆದರ್ಶವಾಗಿವೆ.



ದೆಹಲಿ ಕರ್ನಾಟಕ ಸಂಘದ ಗ್ರಂಥಾಲಯದಲ್ಲಿ ಈ ಮಹನೀಯರ, ಅಲ್ಲದೇ ಕನ್ನಡದ ಇತರ ಬರಹಗಾರರ ಮೇರು ಕೃತಿಗಳು ಲಭ್ಯವಿವೆ. ಹೊರನಾಡಿನಲ್ಲಿರುವ ನಮಗೆ ಅದೊಂದು ದೊಡ್ಡ ಅರಿವಿನ ಆಸ್ತಿ. ನಮ್ಮ ಲೌಕಿಕ ಬದುಕಿನ ಉನ್ನತಿಯನ್ನು ಹುಡುಕುತ್ತಾ ಸಾವಿರಾರು ಮೈಲು ದೂರ ಬಂದ ನಮಗೆ ನಮ್ಮ ಅರಿವನ್ನು ವಿಸ್ತರಿಸುವ, ಬದುಕಿನ ಹೊಸ ವ್ಯಾಖ್ಯಾನಗಳನ್ನು ವಿವರಿಸುವ ಗ್ರಂಥಗಳು ನಮಗಾಗಿ ಕಾಯುತ್ತಿವೆ. ಅತ್ಯಂತ ಸಮೃದ್ಧವಾಗಿರುವ ಕನ್ನಡ ಸಾಹಿತ್ಯದ ಒಂದೆರಡು ಎಸಳುಗಳನ್ನು ನಮ್ಮ ಬುದ್ಧಿಯೊಳಗೆ ಹಿಡಿದು ಕೊಳ್ಳುವ ನಿರ್ಣಯವನ್ನು ಈ ಹೊಸವರ್ಷದಲ್ಲಿ ನಾವೆಲ್ಲ ತೆಗೆದುಕೊಳ್ಳೋಣ. ಅಭಿಮತದ ಓದುಗರಿಗೆಲ್ಲಾ ಹೊಸ ವರ್ಷದ ಹಾರ್ಯೆಕೆಗಳು. ಅ

*ಬಾಲಕೃಷ್ಣ ನಾಯ್ಕ್ ಡಿ.*

# Painting Exhibition & Sale

## By artists from karnataka

JAN $12^{th}$ to $18^{th}$ 2014.












Venue:
Art gallery
Delhi Karnataka Sangha
Rao Tularam Marg
Moti Bagh
New Delhi-110022
Phone:26109615

Contact: SHIVA HADIMANI.
web: hadimaniart.in
hadimanisc@gmail.com
cell+919686218885
Delhi- 8800190022

Delhi Karnataka Sangha Abhimatha Monthly,
January - 2014, Price Rs.1/- RNI Regn. No. 53405/91, DL-SW-1/4016/13-15
Printout Date : January 8th / 9th, Postal Date :10th / 11th, Total Pages-20

A PURAVANKARA Company

PROVIDENT™




**OWN A HOME WITH SUPERIOR FEATURES IN BANGALORE.**

FROM JUST RS. 32 LAC* ONWARDS.

**Provident Welworth City**
Yelahanka Doddaballapur Road
Ready-to-occupy **3BHK: Rs. 32 Lac***
1201 Apartments handed over

**Provident Sunworth**
Near Mysore Road-NICE Junction
**2BHK: Rs. 33 Lac* 3BHK: Rs. 40 Lac***
Construction in full swing by L&T Construction

*Including car park & clubhouse. Conditions apply. Statutory fees and government levies are extra.

Provident Sunworth and Welworth City are financed by ICICI Bank Ltd. & ICICI HFC Ltd.

**Landline: 080 4400 4400 Mobile: +91 81308 60877**

www.providenthousing.com | sales@providenthousing.com | CREDAI

SANKALP

BANGALORE | CHENNAI | COIMBATORE | MANGALORE

Editor: Balakrishna Naik D., Printed & Published by C.M. Nagaraja, General Secretary on behalf of Delhi Karnataka Sangha (R)
Rao Tularam Marg, Sector-12, R.K.Puram, New Delhi-110022, Tel: 26109615 and
Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770